ಕಲ್ಯಾಣ ಕಿರಣ

ಮೇ-2011 ಬೆಲೆ-10.00/-



ವಿಶ್ವಗುರು ಬಸವಣ್ಣನವರು
1134-1196



ಮಹಾಷ್ಟ್ರದ ಅಲ್ಲಮಗಿರಿಯಲ್ಲಿ ನಡೆದ ಲಿಂಗಾಯತ ಗಣ ಮೇಳ ಮತ್ತು ಜಗದ್ಗುರು ಬಸವ ಕುಮಾರ ಸ್ವಾಮಿಜೀಯವರಿಂದ ಪೀಠರೋಹಣ







|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-41	ಬಸವ ಶಕೆ -878	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-05	ಮೇ - 2011	ವಾರ್ಷಿಕ ಚಂದಾ 100 ರೂ.

ನಮೋ ನಮೋ ಎನ್ನಿರೈ

ಗುರು ಬಸವನ ಪಾದಕಮಲಕೆ ನಮೋ ನಮೋ ಎನ್ನಿರೈ
ಬಸವೇಶನ ದಿವ್ಯತ್ವಕ್ಕೆ ಶರಣಾಗತರಾಗಿರೈ || ಪ ||

ನಿತ್ಯ ನಿಮ್ಮ ವಾಣಿಯಲ್ಲಿ ಬಸವ ಮಂತ್ರ ನಲಿಯಲಿ
ಸುತ್ತ್ಯವಾದ ಅವನ ವಚನ ಶ್ರೋತ್ರದಲ್ಲಿ ಉಲಿಯಲಿ।
ಮಿಥ್ಯ ಕುಹಕ ಕುಟಿಲವಳಿದು ಮನವು ಅವನ ನೆನೆಯಲಿ
ಸತ್ಯ ಪುರುಷ ಬಸವಣ್ಣನ ರೂಪು ಕಣ್ಣ ತುಂಬಲಿ || 1 ||

ಮಂತ್ರಪುರುಷ ಬಸವರಾಜ ಭಕ್ತ ಜನರ ಭಾಗ್ಯವು
ತಂತ್ರಸಾರ ಯುಗಪುರುಷ ನಾಡ ನಂದಾದೀಪವು
ಕ್ರಾಂತಿವೀರನಾಗಿ ಬಂದು ಜನದ ಭ್ರಾಂತಿ ತೊಡೆದ ಗುರುವು
ಶಾಂತಿದೂತನಾಗಿ ನಿಂದು ಪ್ರೇಮಫಲವನಿತ್ತ ತರುವು || 2 ||

ದೇವನೊಬ್ಬನೆಂದು ಸಾರಿ ಮೂಢಭಾವ ತೊಡೆದನು
ದೇವನವನ ಮಕ್ಕಳಲ್ಲಿ ಭೇದ ಸಲ್ಲದೆಂದನು
ದೇವಪಥದಿ ನಡೆವ ಹಕ್ಕು ಮನುಜರೆಲ್ಲರಿಗೆಂದನು
ಕಾವದೇವನಾಗಿನಿಂದ ಸಚ್ಚಿದಾನಂದ ಕಂದನು || || 3 ||

\- ಮಾತಾಜಿ

ಗುರುವಾದಡೂ ಬಸವಣ್ಣನಿಲ್ಲದೆ ಗುರುವಿಲ್ಲ
ಲಿಂಗವಾದಡೂ ಬಸವಣ್ಣನಿಲ್ಲದೆ ಲಿಂಗವಿಲ್ಲ
ಜಂಗಮವಾದಡೂ ಬಸವಣ್ಣನಿಲ್ಲದೆ ಜಂಗಮವಿಲ್ಲ
ಪ್ರಸಾದವಾದಡೂ ಬಸವಣ್ಣನಿಲ್ಲದೆ ಪ್ರಸಾದವಿಲ್ಲ
ಅನುಭಾವವಾದಡೂ ಬಸವಣ್ಣನಿಲ್ಲದೆ ನುಡಿಯಲಾಗದು
ಇಂತು ಸಂಗಿಸುವಲ್ಲಿ, ನಿಜ ಸಂಗಿಸುವಲ್ಲಿ, ಸುಸಂಗಿಸುವಲ್ಲಿ,
ಮಹಾ ಸಂಗಿಸುವಲ್ಲಿ, ಪ್ರಸಾದ ಸಂಗಿಸುವಲ್ಲಿ
ಕಲಿದೇವಾ, ನಿಮ್ಮ ಶರಣ ಬಸವಣ್ಣನ ನಿಲುವು

ವೀರಗಣಾಚಾರಿ ಮಡಿವಾಳ ಮಾಚಿದೇವರು

ಹಸಿದಡಂಬಲಿ ಮುದ್ದು, ಬಿಸಿಲಿಂಗೆ ಕೊಡೆ ಮುದ್ದು
ಬಸುರಲಿ ಬಂದ ಶಿಶು ಮುದ್ದು। ಲೋಕಕ್ಕೆ
ಬಸವಣ್ಣನೆ ಮುದ್ದು ಸರ್ವಜ್ಞ ||

ಕ್ರಾಂತಿಕವಿ ಸರ್ವಜ್ಞ

★ಕಲ್ಯಾಣ ಕಿರಣ★

ಕಿರಣಗನ್ನಡಿ

ಪುಣೆಯ ವಿಳಾಸಗಳು

ಪೂನಾ ನಗರದಲ್ಲಿ ಮತ್ತು ಸುತ್ತಮುತ್ತಲ ಊರುಗಳಲ್ಲಿ ನೆಲೆಸಿರುವ ಬಂಧು -ಮಿತ್ರ, ಪರಿಚಿತರ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ತಿಳಿಸಿರಿ. ಅವರನ್ನುಸಂಪರ್ಕಿಸಿ ಆಹ್ವಾನ ಕಳಿಸಲು ಅನುಕೂಲವಾಗುತ್ತದೆ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಮಹಾರಾಷ್ಟ್ರ ರಾಜ್ಯದ ಸಾಂಸ್ಕೃತಿಕ ರಾಜಧಾನಿ

ಪುಣೆ ನಗರದಲ್ಲಿ

10ನೆಯ ಲಿಂಗಾಯತ ಧರ್ಮ ಸಮ್ಮೇಳನ

2011ರ ಜೂನ್ 4,5 ಮತ್ತು 6ರಂದು



ಸಮ್ಮೇಳನ ಸ್ಥಳ : ಆಹೇರ್ ಗಾರ್ಡನ್, ಮಂಗಲ ಕಾರ್ಯಾಲಯ,
ಆಹೇರ್ ಎಸ್ಟೇಟ್, ವಾಲ್ಲೇಕರ್‌ವಾಡಿ ರೋಡ್
ಚಿಂಚವಡ್‌ಗಾಂವ, ಪುಣೆ-411033, ಮಹಾರಾಷ್ಟ್ರ ರಾಜ್ಯ

ಸಂಪರ್ಕಿಸಬೇಕಾದ ವಿಳಾಸಗಳು

ಬೆಂಗಳೂರು :
ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್(ರಿ.)
ಬಸವ,ಮಂಟಪ, 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು

ಪುಣೆಯ ಶಾಖೆ:
ಬಸವ ಧರ್ಮ ಪೀಠ (ರಿ.)
ಉಜ್ವಲ ರಿಗಾಲಿಯ ಸೊಸೈಟ, ಮನೆ. ನಂ.3,
ಸರ್ವೇ ನಂ.124/4, ಪ್ರಭಾವಿ ಟೆಕ್ ಪಾರ್ಕ್ ಹತ್ತಿರ
ಬನೇರ್, ಪುಣೆ-411004
ದೂರವಾಣಿ: 07620342899

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಮಹಾರಾಷ್ಟ್ರ ರಾಜ್ಯದ ಪೂನಾ ನಗರದಲ್ಲಿ ಲಿಂಗಾಯತ ಧರ್ಮದ ಹತ್ತನೆಯ ಸಮ್ಮೇಳನ

2011ರ ಜೂನ್ 4, 5 ಮತ್ತು 6ರಂದು

ಸರ್ವರಿಗೂ ಆದರದ ಸುಸ್ವಾಗತ

ಧರ್ಮಕ್ಷೇತ್ರ ಕೂಡಲ ಸಂಗಮದ ಬಸವ ಧರ್ಮ ಪೀಠ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ 2011ನೇ ಇಸವಿಯ ಜೂನ್4,5 ಮತ್ತು 6 ರಂದು ಲಿಂಗಾಯತ ಧರ್ಮದ ಹತ್ತನೆಯ ಸಮ್ಮೇಳನವನ್ನು ಮಹಾರಾಷ್ಟ್ರ ರಾಜ್ಯದ ಪೂನಾ ನಗರದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಮೊಟ್ಟ ಮೊದಲನೆಯ ಸಮ್ಮೇಳನವು 1993ರಲ್ಲಿ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯಲ್ಲಿ ಜರುಗಿತು. ನಂತರ ಕ್ರಮವಾಗಿ ಹೈದರಾಬಾದ್ (1994), ಬೆಂಗಳೂರು, ಇಚಲಕರಂಜಿ, ನವ ದೆಹಲಿ, ಗೋಕಾಕ್, ಮುಂಬಯಿಯ ಮಹಾನಗರದಲ್ಲಿ ಸಮ್ಮೇಳನಗಳು ಜರುಗಿದವು. 1997ರಲ್ಲಿ ಭಾರತದ ಹೆಮ್ಮೆಯ ರಾಜಧಾನಿ ನವದೆಹಲಿಯ ಲಾಲ್ ಕಿಲ್ಲಾ ಮೈದಾನದಲ್ಲಿ, 2005ರಲ್ಲಿ ಲಾಲ್ ಕಿಲ್ಲಾ ಮೈದಾನಕ್ಕೆ ಹತ್ತಿರದಲ್ಲಿ ಇರುವ ದರಿಯಾಗಂಜ್‌ನ ಮಹಾವೀರ ವಾಟಿಕಾದಲ್ಲಿ ಜರುಗಿತು. 2007ರಲ್ಲಿ ಮಹಾವೀರ್ ಎನ್‌ಕ್ಲೇವ್, ಪಾಲಮ್‌ದ ಎಂ.ಸಿ.ಡಿ. ಭವನದ ಸಮೀಪದ ಮೈದಾನದಲ್ಲಿ ಜರುಗಿತು. ಒಂಬತ್ತನೆಯ ಸಮ್ಮೇಳನವನ್ನು ತಮಿಳುನಾಡಿನ ರಾಜಧಾನಿ ಚೆನ್ನಾಯ್ ಪಟ್ಟಣದಲ್ಲಿ 2009ರ ಮೇ 2, 3 ಮತ್ತು 4ರಂದು ನಡೆಸಲಾಯಿತು. ಇದೀಗ ಹತ್ತನೆಯ ಸಮ್ಮೇಳವನ್ನು ಜೂನ್ ದಿ.4-ಶರಣ(ಶನಿ)ವಾರ ದಿ.5-ದೇವ(ಭಾನು)ವಾರ ಮತ್ತು ದಿ.6-ಸೋಮ (ಶಿವ)ವಾರ ದಂದು ಸಂಯೋಜಿಸಲಾಗಿದೆ. ದಿ.4ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಸಂಜೆ 5-30ರಿಂದ ಧರ್ಮ ಚಿಂತನ ಗೋಷ್ಠಿ, 5ರಂದು ಬೆಳಿಗ್ಗೆ 10-30ರಿಂದ ಸಾಮೂಹಿಕ ಪ್ರಾರ್ಥನೆ ಮತ್ತು ಸಾಮೂಹಿಕ ಇಷ್ಟಲಿಂಗ ಪೂಜೆ. ಸಂಜೆ 5-30ರಿಂದ ಧರ್ಮ ಚಿಂತನ ಗೋಷ್ಠಿ, ದಿ.6ರಂದು ಬೆಳಿಗ್ಗೆ ಸಮಾರೋಪ ಸಮಾರಂಭ, ಮಧ್ಯಾಹ್ನದ ಪ್ರಸಾದದ ನಂತರ ಮೆರವಣಿಗೆ.

ಸಮ್ಮೇಳನ ಸ್ಥಳ : ಪೂನಾ ನಗರದ ಚಿಂಚ್‌ವಡ್‌ಗಾಂವ ಪ್ರದೇಶದಲ್ಲಿ ವಾಲ್ಲೇಕರ್
ವಾಡಿ ರಸ್ತೆಯಲ್ಲಿ ಆಹೇರ್ ಎಸ್ಟೇಟ್‌ದಲ್ಲಿರುವ
ಆಹೇರ್ ಮಂಗಲ ಕಾರ್ಯಾಲಯ

(ಪೂನಾ ನಗರದ ಕೇಂದ್ರ ರೇಲ್ವೆ ನಿಲ್ದಾಣದಿಂದ ಲೋಕಲ್ ಟ್ರೇನಿನಲ್ಲಿ ಆಕುರ್ಡಿ ಸ್ಟೇಷನ್‌ಗೆ ಬಂದು ಕೇವಲ 1ಕಿ.ಮಿ.ದೂರದಲ್ಲಿರುವ ಅಲ್ಲಿಂದ ಆಹೇರ್ ಗಾರ್ಡನ್‌ಗೆ ಬರಬೇಕು. ಕರ್ನಾಟಕದ ಕಡೆಯಿಂದ ಬಸ್ಸಿನಲ್ಲಿ ಬರುವವರು ವಲ್ಲಭ ನಗರ ಬಸ್ ನಿಲ್ದಾಣಕ್ಕೆ ಬರಬೇಕು. ಅಲ್ಲಿಂದ ಆಹೇರ್ ಗಾರ್ಡನ್ 4 ಕಿ.ಮಿ. ದೂರವಿರುತ್ತದೆ.)

ವಿಶ್ವಗುರು ಬಸವಣ್ಣನವರು (1134 -1196) ಭಾರತದ ಮೊಟ್ಟ ಮೊದಲ ಸಮತಾವಾದಿ, ಸಮಾಜ ಸುಧಾರಕರು. ಅವರ ದಿವ್ಯ ಸಂದೇಶಗಳು ಎಲ್ಲ ರಾಜ್ಯಗಳಲ್ಲಿ, ಎಲ್ಲ ಭಾಷೆಗಳಲ್ಲಿ ಪ್ರಚಾರವಾಗುವುದು ಅತ್ಯಂತ ಅವಶ್ಯಕವಾಗಿದೆ. ಗುರು ಬಸವಣ್ಣನವರು ಸಂಸ್ಥಾಪಿಸಿಕೊಟ್ಟ ಲಿಂಗಾಯತ

ಧರ್ಮವು ಅತ್ಯಂತ ಪ್ರಗತಿಪರ ವಿಚಾರಗಳಿಂದ ಕೂಡಿದ ರಾಷ್ಟ್ರಧರ್ಮವಾಗಿದೆ. ಇದನ್ನು ಅನುಸರಿಸುವ ಲಿಂಗಾಯತ ಧರ್ಮ ಬಾಂಧವರು ದೇಶದಲ್ಲಿ ಎಲ್ಲೆಡೆ ಚದುರಿದಂತೆ ನೆಲೆಸಿದ್ದಾರೆ. ಲಿಂಗಾಯತ ಸಮಾಜದ ಸಂಘಟನೆ ಮತ್ತು ಬಸವ ತತ್ವ ಪ್ರಚಾರದ ದೃಷ್ಟಿಯಿಂದ ಪ್ರಸ್ತುತ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಭಾಗವಹಿಸುವವರಿಗೆ ಸೂಚನೆಗಳು

1. ಪ್ರತಿನಿಧಿ ಶುಲ್ಕ ಒಬ್ಬರಿಗೆ 800ರೂಗಳು. ಜೂನ್3 ರ ಮಧ್ಯಾಹ್ನದಿಂದ ಜೂನ್ 6 ರ ರಾತ್ರಿವರೆಗೆ ಊಟ ಮತ್ತು ವಸತಿಯ ಜವಾಬ್ದಾರಿ ಸಮ್ಮೇಳನ ಸಮಿತಿಯದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ವಸತಿಯ ಸ್ಥಳದ ವಿವರವನ್ನು ನಂತರ ಕೊಡಲಾಗುವುತ್ತದೆ.

2. ಪೂನಾ ಮತ್ತು ಸುತ್ತಮುತ್ತ ಸಂದರ್ಶನೀಯ ಸ್ಥಳಗಳು ಬಹಳ. ಹೀಗಾಗಿ ಜನರು ಒಂದೆರಡು ದಿವಸ ಜಾಸ್ತಿ ಉಳಿದು ನಗರ ಸಂದರ್ಶನ ಮಾಡುವುದು ಅನಿವಾರ್ಯವಾಗುತ್ತದೆ. ಆಗ ಜನರು ತಮ್ಮ ಜವಾಬ್ದಾರಿ ಮೇಲೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಉತ್ತಮ ವಸತಿ ಗೃಹ ಪಡೆಯಲು ನೆರವು ನೀಡಲಾಗುವುದು. (ಪೂಣೆಯ ಸನಿಹದಲ್ಲಿರುವ ಸಂದರ್ಶನೀಯ ಸ್ಥಳಗಳಲ್ಲಿ ಪ್ರಮುಖವಾದವು ಗಿರಿಧಾಮಗಳಾದ ಮಹಾಬಳೇಶ್ವರ (130.ಕಿ.ಮಿ.) ಲೋನಾವಳ್ (40.ಕಿಮಿ.) ದೇಹೂ (15ಕಿ.ಮಿ.)- ಸಂತ ತುಕಾರಾಂ ಅವರ ಐಕ್ಯ ಸ್ಥಾನ, ಆಳಂದಿ (25 ಕಿ.ಮಿ) ಸಂತ ಜ್ಞಾನೇಶ್ವರರ ಸಮಾಧಿ ಸ್ಥಳ, ಭಕ್ತಿ-ಶಕ್ತಿ ಗಾರ್ಡನ್- ನಿಗಡಿ, ಮುಂಬೈ (170-ಕಿ.ಮಿ.) ಇತ್ಯಾದಿ.

3. ಪ್ರತಿನಿಧಿ ಶುಲ್ಕವನ್ನು ಆದಷ್ಟು ಬೇಗನೆ ಕಳಿಸಿ ವಿವರಗಳನ್ನು ನೀಡಬೇಕು. ಅಕ್ಕಿ, ದವಸ-ಧಾನ್ಯ, ತರಕಾರಿ ಇತ್ಯಾದಿಗಳ ಬೆಲೆ ತೀರಾ ಏರಿರುವುದರಿಂದ ಸಾಮಗ್ರಿಗಳನ್ನು ಖರೀದಿಸುವುದು ಅತ್ಯಗತ್ಯವಾಗಿರುತ್ತದೆ. ಮತ್ತು ವಸತಿ ವ್ಯವಸ್ಥೆಗಾಗಿ ಕಲ್ಯಾಣ ಮಂಟಪಗಳನ್ನು ಕಾಯ್ದಿರಿಸಬೇಕಾಗುತ್ತದೆ.

4. ಸಮ್ಮೇಳನ ಸಮಿತಿಯು ಸಾಮೂಹಿಕವಾಗಿ ವಸತಿ ವ್ಯವಸ್ಥೆಯನ್ನು ಮಾಡುತ್ತದೆ. ಪ್ರತ್ಯೇಕವಾಗಿ ಲಾಡ್ಜಿಂಗ್‌ದಲ್ಲಿ ಇರಬಯಸುವವರು ಮೊದಲೇ ತಿಳಿಸಬೇಕು. ಸಮ್ಮೇಳನ ಸ್ಥಳಕ್ಕೆ ಸಮೀಪದಲ್ಲಿರುವ ಲಾಡ್ಜಿಂಗ್ ಹುಡುಕಲಾಗುವುದು. ಲಾಡ್ಜಿಂಗ್ ಕೋಣೆಯ ಬಾಡಿಗೆ ಜೊತೆಗೆ ಸರ್ವೀಸ್ ಛಾರ್ಜು ಸೇರಿಸಲಾಗುವುದು.

ಬೇಗನೆ ಪ್ರತಿನಿಧಿ ಶುಲ್ಕವನ್ನು ಕಳಿಸಿದರೆ ಗುರುತಿನ ಚೀಟಿ (Identity Card) ಕಳಿಸಿಕೊಡಲು ಸಾಧ್ಯವಾಗುವುದು. ಅದರಲ್ಲಿ ಕ್ರಮ ಸಂಖ್ಯೆ, ಸಂಸ್ಥೆಯ ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ವಿವರಗಳು ಇರುತ್ತವೆ.

5. ಸಮ್ಮೇಳನಕ್ಕೆ ಬಂದವರು 3 ದಿನ ತಪ್ಪದೆ ಭಾಗಿಯಾಗಿ ನಂತರ ಸುತ್ತ ಮುತ್ತಲಿನ ಸ್ಥಳ ನೋಡಲು ಹೋಗಬೇಕು. ಭಾಗವಹಿಸಿದ ಅಲ್ಲಿನ ಅತಿಥಿಗಳಿಗೆ ನಮ್ಮ ಧರ್ಮ - ಸಂಸ್ಕೃತಿ - ಸಮಾಜಗಳ ಪರಿಚಯ ಮಾಡಿಕೊಡಬೇಕೆಂಬ ಹಂಬಲ, ಉತ್ಸಾಹ ನಮ್ಮದಾಗಿರುತ್ತದೆ. ಆಗ ಪರವೂರಿಂದ ಬಂದವರು ಬರೀ ಊರು ತಿರುಗುತ್ತಿದ್ದರೆ ಪ್ರಯೋಜನವೇನು? ಕೇವಲ ಊರು ನೋಡಲು ಬರುವುದೇ ಆದರೆ ಬೇರೆ ಸಮಯದಲ್ಲಿ ಹೋಗಿ, ಬರಬಹುದು. ಆದ್ದರಿಂದ ಅನ್ಯರ ಎದುರು ನಮ್ಮ ಸಮಾಜದ ಶಿಸ್ತು, ಒಗ್ಗಟ್ಟು, ಸಂಸ್ಕೃತಿಯನ್ನು ತೋರಿಸುವುದು ಅವಶ್ಯವಿರುತ್ತದೆ.

ಪ್ರತಿನಿಧಿ ಶುಲ್ಕವನ್ನು ಜನರೇ ನೇರವಾಗಿ ಮೊದಲೇ ಕಳಿಸಿ, ಐಡೆಂಟಿಟಿ ಕಾರ್ಡ್

ಪಡೆದುಕೊಳ್ಳಬೇಕು ಅಥವಾ ವಿಶ್ವಾಸವಿರುವ ನೇತಾರರನ್ನು ಆಯ್ಕೆ ಮಾಡಿಕೊಂಡು ಅವರ ಮೂಲಕ ಭಾಗವಹಿಸುವ ಎಲ್ಲರ ಹಣವನ್ನು ಮೊದಲೇ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬೇಕು ಅಥವಾ ಬೆಂಗಳೂರಿಗೆ ಬಂದು ನಗದು ಕಟ್ಟಿ ರಸೀತಿ ಪಡೆಯಬೇಕು.

6. ಸ್ವಯಂ ಸೇವಕರು, ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ನಾಲ್ಕಾರು ದಿವಸ ಮೊದಲೇ ಬಂದರೆ ಸೇವೆ ಮಾಡಲು, ಬಂದವರಿಗೆ ಸೂಚನೆ ನೀಡಲು ಅನುಕೂಲವಾಗುತ್ತದೆ. ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಬೇಕು.

7. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ ಕಾವಿಯ ಸ್ಕಾರ್ಫ್ ಮತ್ತು ಬ್ಯಾಡ್ಜ್ ಧರಿಸಿರಬೇಕು. ಐಡೆಂಟಟಿ ಕಾರ್ಡ್ - ಗುರುತಿನ ಚೀಟಿ ಹೊಂದಿರಬೇಕು. (ಹಿಂದಿನ ಸಮ್ಮೇಳನಗಳಲ್ಲಿ ಸ್ಕಾರ್ಫ್‌ಗಳು ಕಳೆದುಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು)

ಸಾಮೂಹಿಕ ಪ್ರಾರ್ಥನೆ ಮತ್ತು ಇಷ್ಟಲಿಂಗ ಪೂಜೆ

ಲಿಂಗಾಯತ ಧರ್ಮದ ಪ್ರಮುಖ ತತ್ವ ಧಾರ್ಮಿಕ ಸಹೋದರತ್ವ. ಇದನ್ನು ಸಾಧಿಸಲೋಸುಗ ಬಸವ ಮಂಟಪಗಳನ್ನು ಕಟ್ಟಿ ದೇವ (ಭಾನು) ವಾರದಂದು ಸಾಮೂಹಿಕ ಪ್ರಾರ್ಥನೆ ನಡೆಸಲಾಗುತ್ತಿದೆ. ಅದೇ ರೀತಿ ಇಷ್ಟಲಿಂಗಾರ್ಚನೆ ಲಿಂಗಾಯತ ಧರ್ಮದ ಜೀವಾಳ. ಈ ಎರಡೂ ಕಾರ್ಯಕ್ರಮಗಳನ್ನು ದೇವ (ಭಾನು)ವಾರ ದಿ.5-6-2011ರಂದು ಬೆಳಿಗ್ಗೆ 10-30ರಿಂದ ನಡೆಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಪೂಜಾ ಸಾಮಗ್ರಿಗಳಾದ ತಟ್ಟೆ - ಲೋಟ, ಪತ್ರೆ-ಪುಷ್ಪ, ವಿಭೂತಿ, ಅಗರಬತ್ತಿ - ಕರ್ಪೂರ, ನೈವೇದ್ಯಕ್ಕೆ ಕಲ್ಲುಸಕ್ಕರೆ, ಗುರು ಬಸವಣ್ಣನವರ ಚಿಕ್ಕ ಭಾವಚಿತ್ರ ತಂದು, ಪೂಜೆಯಲ್ಲಿ ಭಾಗಿಗಳಾಗಬೇಕು.

ಧನ ಸಹಾಯಕ್ಕೆ ವಿನಂತಿ

ಮಹಾರಾಷ್ಟ್ರದ ಪ್ರಮುಖ ನಗರ, ಸಾಂಸ್ಕೃತಿಕ ರಾಜಧಾನಿ ಪೂನಾದಲ್ಲಿ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಭಕ್ತಿ ಮತ್ತು ಶಕ್ತಿ ಇರುವ ದಾನಿಗಳು ಒಂದು ಹೊತ್ತಿನ ಉಪಹಾರದ ಖರ್ಚು, ಮಧ್ಯಾಹ್ನದ, ರಾತ್ರಿಯ ಊಟದ ವೆಚ್ಚವನ್ನು ತಮ್ಮ ಶಕ್ತ್ಯಾನುಸಾರ ವಹಿಸಿಕೊಳ್ಳಲು ಅವಕಾಶ ಉಂಟು.

ಲಿಂಗಾಯತ ಧರ್ಮದ ಮೂಲ ಸಂವಿಧಾನವಾದ ಕ್ರಾಂತಿಕಾರಿ ವಚನ ಸಾಹಿತ್ಯವು ಕನ್ನಡದಲ್ಲಿದ್ದು ಇದು ಮರಾಠಿ ಭಾಷೆಯಲ್ಲೂ ಲಭ್ಯವಾಗುವಂತೆ ಮಾಡಲು ಕೆಲವು ಕೃತಿಗಳನ್ನು ಭಾಷಾಂತರಿಸಲಾಗುತ್ತಿದೆ. ಆದ್ದರಿಂದ ಗ್ರಂಥ ಪ್ರಕಟಣೆಗೆ ನೆರವಾಗುವ ದಾನಿಗಳಿಗೂ ಅವಕಾಶವಿದೆ.

12ನೆಯ ಶತಮಾನದ ಕಲ್ಯಾಣ ಕ್ರಾಂತಿಯ ನಂತರ ಚದುರಿ ಹೋದ ಕಾರಣದಿಂದಲೂ ಇತ್ತೀಚಿನ ಶತಮಾನಗಳಲ್ಲಿ ಉದ್ಯೋಗದ ನಿಮಿತ್ತ ವಿವಿಧ ರಾಜ್ಯಗಳಲ್ಲಿ ನೆಲೆಸಿದುದರಿಂದಲೂ ಮೂಲವಾಹಿನಿಯಿಂದ ಚದುರಿ ಹೋಗಿ, ಕೆಲವೊಂದು ರಾಜ್ಯಗಳಲ್ಲಿ ಅತ್ಯಂತ ಆರ್ಥಿಕ ಸಂಕಷ್ಟದಲ್ಲಿ

ಇರುವ ಲಿಂಗಾಯತರನ್ನು ಸಂಘಟಿಸಲು ಮತ್ತು ಇವರಿಗೆ ಸಾಹಿತ್ಯಿಕ, ಶರಣ ಸಾಂಸ್ಕೃತಿಕ ಸಂಸ್ಕಾರ ನೀಡಲೋಸುಗವೇ ಈ ಸಮ್ಮೇಳನವನ್ನು ಸಂಯೋಜಿಸಿರುವ ಕಾರಣ ಈ ಕರಪ್ರತದ ವಿವರವನ್ನು ನಿಮ್ಮ ಬಂಧು - ಮಿತ್ರ, ಸಹ - ಧರ್ಮೀಯರಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇವೆ.

ಮಹಾ ಪೋಷಕರು	: ರೂ 10,000/-	(ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು	: ರೂ 5,000/-	(ಐದು ಸಾವಿರ ಹಾಗೂ ಮೇಲ್ಪಟ್ಟು)
ವಿಶೇಷ ದಾನಿಗಳು	: ರೂ 3,000/-	(ಮೂರು ಸಾವಿರ ಹಾಗೂ ಮೇಲ್ಪಟ್ಟು)
ದಾನಿಗಳು	: ರೂ 1,000/-	(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಪ್ರತಿನಿಧಿ ಶುಲ್ಕ	: ರೂ 800/-	(ಎಂಟು ನೂರು ಹಾಗೂ ಮೇಲ್ಪಟ್ಟು)
ಹಿತೈಷಿಗಳು	: ರೂ 500/-	(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು. ಪ್ರಥಮ ಮಹಿಳಾ ಜಗದ್ಗುರುಗಳು, ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಹತ್ತನೆಯ ಲಿಂಗಾಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾರರು, ಗಣ್ಯರು, ಸಮಾಜ ಬಾಂಧವರು, ಸಾಹಿತಿಗಳು, ಉಪನ್ಯಾಸಕರು, ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾರವಾಗಿ ದೇಣಿಗೆ ನೀಡಿ, ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ, ಕಾಣಿಕೆ ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್ ಬರೆಯಬೇಕು. ಪರವೂರಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

Basava Mahamane Charitable Trust, Payable at BANGALORE.

ವ್ಯವಹರಿಸುವ ವಿಳಾಸ :

Basava Mahamane Charitable Trust (R)
BASAVA MANTAPA
2035, 20th Main, Chord Road, 2nd Block
Rajajinagar, BANGALORE -10, Karnataka -St

Ph : 080- 23131476, 22923736

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು -07620342899
ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ -07620784855

ದಾನಿಗಳಿಗೆ 80 ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯವಿದ್ದು, ದಾನಿಗಳು ಇದರ ಸದುಪಯೋಗ ಮಾಡಿಕೊಳ್ಳಲು ಕೋರುತ್ತೇವೆ.

****

ಸಂಪಾಕೀಯ: - ಮಾತಾಜಿ

1.ಮಠಗಳು ಅಧ್ಯಾತ್ಮಿಕ ಕೇಂದ್ರಗಳಾಗದೆ ಅವಾಂತರಗಳ ಆಗರಗಳಾಗುತ್ತಿವೆಯೆ?

ಒಮ್ಮೊಮ್ಮೆ ಅನಿಸುತ್ತದೆ ಅಧ್ಯಾತ್ಮಿಕತೆ - ವೈರಾಗ್ಯಭಾವದಿಂದ ಪ್ರೇರಿತಳಾಗಿ ಮನೆಯನ್ನು ತೊರೆಯುವಾಗ ಇಂದು ತಿಳಿದು ಬಂದಿರುವ ಸಂಗತಿಗಳು ತಿಳಿದಿದ್ದರೆ ಮನೆಯನ್ನು ಬಿಡುವ ಧೈರ್ಯ ಮಾಡುತ್ತಿದ್ದೆನೆ? ಧೇವರಿಗೆ ಧನ್ಯವಾದ ! ಆಗ ಇದ್ದುದು ಮುಗ್ಧತೆ ಮತ್ತ ಛಲ. ನಮ್ಮ ತಾತಂದಿರು ಹೇಳುತ್ತಿದ್ದರು, ನೋಡಮ್ಮ, ನೀನು ತಿಳಿದಂತೆ ಧಾರ್ಮಿಕ ಜಗತ್ತು ಇಲ್ಲ. ಆಗ ನಾನು ಹೇಳಿದೆ, ಯಾರು ಹೇಗೆ ಇರಲಿ, ನಾವು ಸರಿಯಾಗಿ ಇದ್ದು ತೋರಿಸಿದರೆ ಆಗುವುದಲ್ಲವೆ? ಏಕೆ ಈ ವಿಷಯ 50 ವರ್ಷಗಳ ನಂತರ ನೆನಪಿಗೆ ಬಂತು ಎಂದರೆ ಮಠಮಾನ್ಯಗಳು, ಧರ್ಮಗುರುಗಳು ಮಾಡುತ್ತಿರುವ ಎಗ್ಗಿಲ್ಲದ ರಾಜಕೀಯ ನೋಡಿ, ಅಸಹ್ಯವೆನಿಸಿ ಲಿಂಗಾಯತ ಸಮಾಜ ಯಾವುದೇ ಮಾಗದರ್ಶನ ಮತ್ತು ಸಂಘಟನೆ ಇಲ್ಲದೆ ದಿಕ್ಕೆಟ್ಟು ಹೋಗುತ್ತಿದೆ. ಹೆಚ್ಚಿನ ಮಠ ಮಾನ್ಯಗಳು ವ್ಯವಹಾರಿಕ ಕೇಂದ್ರಗಳಾಗಿವೆ. ಲಿಂಗಾಯತ ಮಠಗಳು ವಿದ್ಯಾದಾನದಲ್ಲಿ ಮುಂದಿವೆ ಎಂದು ಬಹಳಷ್ಟು ಹೇಳಿಕೊಳ್ಳುವುದುಂಟು. ಒಂದು ಕಾಲದಲ್ಲಿ ಅವುಗಳ ಕೊಡುಗೆ ಅನನ್ಯ. ಸಮಾಜದಲ್ಲಿ ಶಿಕ್ಷಣವಿರಲಿಲ್ಲ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಶಿಕ್ಷಣ ಗಗನ ಕುಸುಮವಾಗಿತ್ತು. ಆಗ ಭಿಕ್ಷೆ ಬೇಡಿ ಮಠಾಧೀಶರು ಜೋಳಿಗೆ ಹಿಡಿದು ದವಸ ಧಾನ್ಯ ಧನ ಸಂಗ್ರಹಣೆ ಮಾಡಿ ಮಕ್ಕಳನ್ನು ಓದಿಸಿದರು. ಈಗ ಅಂಥ ಶ್ರಮವೇನೂ ಇರದೆ ಸರ್ಕಾರಿ ಅನುದಾನದೊಂದಿಗೆ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುವುದು. ನಿಜ, ಮಠಗಳು ಶಾಲೆ-ಕಾಲೇಜು, ಹಾಸ್ಟೆಲ್ ನಡೆಸುತ್ತಿವೆ. ಆದರೆ ಅಲ್ಲಿ ಧಾರ್ಮಿಕ ಸಂಸ್ಕಾರವೇನಾದರೂ ಸಿಗುತ್ತಿದೆಯೆ? ಅದರಲ್ಲಿಯೂ ಲಿಂಗಾಯತ ಮಠಗಳು ತಮ್ಮ ಸ್ವಧರ್ಮವನ್ನು, ಗುರು ಬಸವಣ್ಣನವರ ತತ್ವಾದರ್ಶಗಳನ್ನು ಬೋಧಿಸುತ್ತಲಿವೆಯೆ? ಕ್ರೈಸ್ತ ವಿದ್ಯಾಸಂಸ್ಥೆಯಲ್ಲಿ ಓದಿದ ಕ್ರೈಸ್ತೇತರ ಮಕ್ಕಳು ಸಹ ಕ್ರಿಸ್ತ ಧರ್ಮವನ್ನು ತಿಳಿದುಕೊಂಡಿರುತ್ತಾರೆ. ಇನ್ನು ಮುಸ್ಲೀಮರಂತೂ ತಮ್ಮ ಉರ್ದುಶಾಲೆಗಳಲ್ಲಿ ಮದರಸಾ (ಧರ್ಮ ತರಬೇತಿ ಕೇಂದ್ರಗಳಲ್ಲಿ) ಕಡ್ಡಾಯವಾಗಿ, ರಾಜಾರೋಷವಾಗಿ ತಮ್ಮ ಇಸ್ಲಾಂ ಧರ್ಮವನ್ನು ಕಲಿಸುತ್ತಾರೆ.

ಬರಬರುತ್ತಾ ಬಹುಪಾಲು ಮಠಗಳು ರಾಜಕೀಯ ಕೇಂದ್ರಗಳಾಗುತ್ತಿವೆ. ವಿಧಾನ ಸೌಧದಲ್ಲಿ ಇರಬೇಕಾದ ಸಚಿವ ಸಂಪುಟ ಮಠಗಳಲ್ಲಿ ಬೀಡುಬಿಡುತ್ತಿದೆ. ಅಧಿಕಾರ ಗದ್ದುಗೆಗೆ ನೇತಾರರನ್ನು ಏರಿಸಬೇಕಾದ ಶಾಸಕರಿಗಿಂತಲೂ ಸ್ವಾಮಿಗಳೇ ಆ ಕೆಲಸವನ್ನು ನಿರ್ವಹಿಸುತ್ತಿರುವರು. ವ್ಯಕ್ತಿಯ ಅನರ್ಹತೆಯನ್ನು ಕಡೆಗಣಿಸಿ ಅವರನ್ನು ಅಧಿಕಾರಕ್ಕೆ ಏರಿಸುವಂತೆ ನೇತಾರರ ಮೇಲೆ ಒತ್ತಡ ತರುವರು. ಇತ್ತೀಚೆಗೆ, ನ್ಯಾಯಾಂಗವನ್ನೂ ಪ್ರವೇಶಿಸಿ ನ್ಯಾಯಾಧೀಶರುಗಳಿಗೆ ಆಶೀರ್ವದಿಸುವ ಮೂಲಕ ರಾಜಕೀಯ ನೇತಾರರನ್ನು ಕ್ರಮಗಳಿಂದ ರಕ್ಷಿಸುತ್ತಿರುವರೆಂಬ ವದಂತಿ ಹರಡುತ್ತಿವೆ. ಗದ್ದುಗೆ ದರ್ಶನ, ಕರಿದಾರ, ತಾಯಿತ ಕಟ್ಟಿಸಿಕೊಳ್ಳುವುದಕ್ಕೆ, ನಿಂಬೆ ಹಣ್ಣು ಮಂತ್ರಿಸಿಕೊಳ್ಳುವುದಕ್ಕೆ ಮಠಕ್ಕೆ ಬರುವ ಮೂಢಭಕ್ತರೊಂದು ಕಡೆ ರಾಜಕೀಯ ಚಟುವಟಿಕೆಗಳಿಗಾಗಿ ನುಗ್ಗುವ ರಾಜಕಾರಣಿಗಳು, ಗಣ್ಯರ ದಂಡು ಇನ್ನೊಂದು. ಇಂಥ ಹಿನ್ನೆಲೆಯಲ್ಲಿ ಅಧ್ಯಾತ್ಮ ಜೀವಿಗಳಿಗೆ ಗುರುಗಳ ಸನ್ನಿಧಿ ಸಿಗುವುದು ಹೇಗೆ ಸಾಧ್ಯ? ಇನ್ನು ಮಾರ್ಗ ದರ್ಶನವಂತೂ ದೂರವೇ ಉಳಿಯಿತು.

****

ಯಾರು ದೊಡ್ಡವರು?

ಒಂದು ಬಗೆಯ ಸಮೂಹ ಸನ್ನಿ ಜನರನ್ನು ಆವರಿಸುತ್ತಿದೆ. ಜನರ ದೃಷ್ಟಿಯಲ್ಲಿ ದೊಡ್ಡವರು? ಬಹಳಷ್ಟು ಸ್ಕೂಲು, ಕಾಲೇಜು ನಡೆಸುವವರು. ಬಹಳಷ್ಟು ಹಣವನ್ನು ಸಂಗ್ರಹಿಸಿದವರು. ರಾಜಕೀಯ ಪ್ರಮುಖರ ಸ್ನೇಹ ಬೆಳೆಸಿಕೊಂಡವರು. ರಾಜಕೀಯ ಧುರೀಣರು ಬೆರಳ ತುದಿಯಿಂದ ಕುಣಿಸುವವರು. ಮಠಗಳ ಮೂಲಕ ದೊಡ್ಡ ದೊಡ್ಡ ವ್ಯವಹಾರ ಕುದುರಿಸುವವರ. ರಾಜಕೀಯ ವ್ಯಕ್ತಿಗಳನ್ನು ಓಲೈಸಿ, ಮುಖಸ್ತುತಿ ಮಾಡಿ ಬೇಕಾದ್ದನ್ನು ಗಿಟ್ಟಿಸಿ ಕೊಳ್ಳುವರು. ಸತ್ಯವನ್ನು ದಿಟ್ಟತನದಿಂದ ನುಡಿಯದವರು ಇತ್ಯಾದಿ ಇತ್ಯಾದಿ. ಒಬ್ಬ ಅಧ್ಯಾತ್ಮ ಜೀವಿ, ತ್ಯಾಗಿಯಲ್ಲಿ ಇರಬೇಕಾದ ಯಾವ ಲಕ್ಷಣಗಳೂ ಅಂಥ ದೊಡ್ಡ ಮನುಷ್ಯರಲ್ಲಿ ಕಾಣಬಾರದು.

ಇಂಥ ವಿಶಿಷ್ಟ ವಾತಾವರಣದಲ್ಲಿ ಸಾಧಕರ ಮನಸ್ಸು ಹೊಯ್ದಾಡುವುದು ಸಹಜ. ಆದರೂ ಅವರು ವಿಚಲಿತಾಗದೆ ಅಂತಃಸಾಕ್ಷಿಗೆ ಅನುಗುಣವಾಗಿ ಬದುಕಬೇಕು ಬೆಲ್ಲವಿದ್ದಲ್ಲಿ ನೊಣಗಳು ಮುತ್ತಿಕೊಳ್ಳುವವು. ಮಕರಂದವಿದ್ದಲ್ಲಿ ಜೇನ್ನೊಣಗಳು ಬರುವವು ಹಾಗೆ ಅಕ್ರಮ ಸಂಪತ್ತು ಇದ್ದಲ್ಲಿ ಸ್ವಾರ್ಥಿಗಳು ಬಂದು ಸಮಾವೇಶವಾಗುವರು. ಆದ್ದರಿಂದ ನಿಜವಾದ ತ್ಯಾಗಿಗಳು ಯಾವ ಪ್ರಲೋಭನೆಗೆ ಈಡಾಗದೆ ತಮ್ಮ ಅಂತರಾತ್ಮದ ಧ್ವನಿಗೆ ಓಗೊಡಬೇಕು. ಏಕೆಂದರೆ, ತೃಷೆಯ ತಣಿಸದಿಹ ಭವ ಸಾಗರಕ್ಕಿಂತ ತಣಿವನ್ನು ನೀಡುವ ಕಿರು ತೊರೆ, ಝರಿ ಆಗುವುದು ಬಹಳ ಲೇಸು!

ಶ್ರೀ ವೀರೇಂದ್ರ ಪಾಟೀಲರು ಕಾಂಗ್ರೆಸ್ಸನ್ನು ಗೆಲ್ಲಿಸಿ ಮುಖ್ಯ ಮಂತ್ರಿಯಾಗಿದ್ದರು. ಅವರ ತಾಲ್ಲೋಕಿನ (ಚಿಂಚೋಳ್ಳಿ)ನಲ್ಲಿ ಅವರಿಗೆ ವಿಶೇಷ ಸನ್ಮಾನವನ್ನು ಜನತೆ ಇಟ್ಟುಕೊಂಡಿದ್ದರು. ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೆ ಅಭಿನಂದನೆ ಇತ್ತು. ಪೂಜ್ಯ ಅಪ್ಪಾಜಿಯವರು ಹತ್ತಿರದಲ್ಲೇ ಪ್ರವಚನ ಮಾಡುತ್ತಿದ್ದರಿಂದ ಅವರ ಸನ್ನಿಧಿಯಲ್ಲಿ ಮುಖ್ಯಮಂತ್ರಿಗಳನ್ನು ಸತ್ಕರಿಸಲು ಬಯಸಿ ಸಮಿತಿಯವರು ಆಹ್ವಾನ ನೀಡಿದ್ದರು. ವೀರೇಂದ್ರ ಪಾಟೀಲರು ಹುಟ್ಟಿನಿಂದ ಲಿಂಗಾಯತರಿದ್ದರೂ ಲಿಂಗಧಾರಣೆ ಮಾಡಿಕೊಂಡಿರಲಿಲ್ಲ. ಇದು ತಿಳಿದು ಅಪ್ಪಾಜಿ , ವಿದ್ಯೆಯುಳ್ಳವ ವಿದ್ಯಾವಂತ, ಗುಣವಿದ್ದವ ಗುಣವಂತ, ಲಿಂಗವಿದ್ದವ ಮಾತ್ರ ಲಿಂಗವಂತ. ಇಷ್ಟಲಿಂಗ ಜಾತಿಯ ಕುರುಹಲ್ಲ. ಮಾನವ ಮಾನವರಲ್ಲಿ ಜಾತಿಭೇದ ಮಾಡಬಾರದೆಂಬ ಜ್ಯೋತಿಯ ಕುರುಹು ಎಂದು ತಮ್ಮ ಗಂಡು ಮೆಟ್ಟಿನ ಶೈಲಿಯಲ್ಲಿ ಹೇಳಿದರು. ಕಾರ್ಯಕರ್ತರು ತಲ್ಲಣಿಸಿಬಿಟ್ಟರು.

ಕಾರ್ಯಕ್ರಮ ಮುಗಿದ ಮೇಲೆ ಶ್ರೀ ವೀರೇಂದ್ರ ಪಾಟೀಲರು ಪೂಜ್ಯ ಅಪ್ಪಾಜಿಯವರನ್ನು ತಮ್ಮ ಮನೆಗೆ ಆಹ್ವಾನಿಸಿದರು. ಲಿಂಗಧಾರಣೆ ಮಾಡಿಸಿಕೊಂಡು, ಪಾದಪೂಜೆ ಮಾಡಿ ಹೇಳಿದರು, ಎಲ್ಲ ಮಠಗಳನ್ನೂ ಸಂದರ್ಶಿಸಿದ್ದೇನೆ. ನಾವು ಬರ್ತೇವೆ ಎಂದು ಮಾಲೆ ಹಿಡಿದು ಬಾಗಿಲಲ್ಲಿ ಗುರುಗಳು ಕಾಯುತ್ತಿರುತ್ತಾರೆ. ನಮ್ಮ ತಪ್ಪನ್ನು ಯಾರೂ ಎತ್ತಿ ತೋರಿಸುವುದಿಲ್ಲ. ನೀವೇ ಮೊದಲಿಗರು ನನಗೆ ಬುದ್ಧಿ ಹೇಳಿದ್ದು. ಅವರು ಬೇಸರ ಮಾಡಿಕೊಂಡಿರದೆ ಸಂತೋಷ ಪಟ್ಟಿದ್ದರು. ಇಂದು ಯಡೆಯೂರಪ್ಪನವರು ಇಡೀ ರಾಜ್ಯವೇ ನೋಡುವಂತೆ ಕೆಲವು ತಪ್ಪುಗಳನ್ನು ಮಾಡುತ್ತಲಿದ್ದಾರೆ. ಇದರಿಂದ ಲಿಂಗಾಯತ ಸಮಾಜಕ್ಕೆ ನಾಚಿಕೆ ಎನ್ನಿಸುತ್ತಿದೆ. ದೊಡ್ಡ ಗುರುಗಳು ಬಹಿರಂಗವಾಗಿ ಹೇಳದಿದ್ದರೂ ಆಂತರಂಗಿಕವಾಗಿಯಾದರೂ ಬುದ್ಧಿ ಹೇಳುವುದು ಅವರ ಕರ್ತವ್ಯವಾಗಿದೆ.

2. ವೀರಶೈವ ಮಹಾಧಿವೇಶನ

ಧಾರ್ಮಿಕ ಸಮಾವೇಶವೋ/ ರಾಜಕೀಯ ಸಮಾವೇಶವೋ

(ಸ್ವಜನಪಕ್ಷಪಾತ, ಬಂಧುಪ್ರೇಮ, ಡೀ-ನೋಟಿಪೀಕೇಷನ್ ಹಗರಣ, ಗಣಿಗಾರಿಕೆಯ ಅಕ್ರಮ-ಇತ್ಯಾದಿ ಆರೋಪಗಳನ್ನು ಎದುರಿಸುತ್ತಿರುವ ಮುಖ್ಯಮಂತ್ರಿಗಳನ್ನು ಸಾರಾಸಗಟಾಗಿ ಬೆಂಬಲಿಸುವ ವೀರಶೈವ ಮಹಾಸಭೆಯ ಒತ್ತಾಸೆ ಸ್ವಾಭಿಮಾನಿ ಸಂಸ್ಕೃತಿಯ ಶರಣ ಪರಂಪರೆಗೆ ಅಪಮಾನ ಕಾರವಲ್ಲವೆ?)

"Spiritualise the politics" ಎಂದರು ಮಹಾತ್ಮಾ ಗಾಂಧೀಜಿ. ರಾಜಕೀಯವನ್ನು ದೈವೀಕರಣಗೊಳಿಸಬೇಕೆಂಬುದು ಅವರ ಆಶಯ. ಆದರೆ ಬರಬರುತ್ತ ರಾಜಕೀಯವು ದೈವೀಕರಣಗೊಳ್ಳುವುದಕ್ಕಿಂತ ಧರ್ಮವೇ ರಾಜಕೀಯದ ಸಂಪರ್ಕದಿಂದ ಕಲುಷಿತಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಇದಕ್ಕೆ ಸ್ಪಷ್ಟ ನಿದರ್ಶನ 22ನೇ ವೀರಶೈವ ಮಹಾಧಿವೇಶನ. ಸುತ್ತೂರು ಮಠದ ಆಶ್ರಯದಲ್ಲಿ ನಡೆದ ಮೂರು ದಿನಗಳ ಅಧಿವೇಶನ ಇದು ಧಾರ್ಮಿಕ ಸಮಾವೇಶವೋ ರಾಜಕೀಯ-ಅದೂ ಬಿಜೆಪಿ ಪೋಷಿತ-ಸಮಾವೇಶವೋ ಎಂಬ ಅಭಿಪ್ರಾಯವನ್ನು ಹುಟ್ಟಿಸಿತು. ಜನರಿಗೆ ಧಾರ್ಮಿಕ ಸಂಸ್ಕಾರವನ್ನು ನೀಡುವ ಬದಲು ಮುಖ್ಯಮಂತ್ರಿಗಳನ್ನು ವೈಭವೀಕರಿಸುವ ಹೂಗಳು ಭಟ್ಟಂಗಿ ಕಾರ್ಯಕ್ರಮವಾಗಿ ಈ ಸಮಾವೇಶ ತೋರಿಬಂತು.

ಒಂದು ಬೃಹತ್ ಧಾರ್ಮಿಕ ಸಮುದಾಯವಾಗಿರುವ ಲಿಂಗಾಯಿತ ಸಮಾಜಕ್ಕೆ ಒಂದು ಶ್ರೇಷ್ಠ ಶರಣ ಪರಂಪರೆ ಇದೆ. ಇದರ ಪ್ರಕಾರ ಜಾತಿ ಮುಖ್ಯವಲ್ಲ ವ್ಯಕ್ತಿಯ ಸಾಧನೆ, ದೃಷ್ಟಿಕೋನ, ತತ್ವ-ಸಿದ್ಧಾಂತಗಳು ಮುಖ್ಯ 'ಜಾತಿ' ಬಂಧುಗಳ ಅಖಂಡ ಪ್ರೀತಿಗೆ ಪಾತ್ರರಾಗಿರುವ ಶ್ರೀ ಬಿ.ಎಸ್.ಯಡಿಯೂರಪ್ಪನವರು. "ನನಗೆ ಕಿವಿ ಹಿಂಡಿ ಬುದ್ಧಿ ಹೇಳುವ ಅಧಿಕಾರವಿರುವುದು ಮಠಾಧೀಶರಿಗೆ ಮಾತ್ರ" ಎಂದು ಹೇಳಿದ್ದಾರೆ. ಅಂತಹ ಧೈರ್ಯ, ಆತ್ಮಬಲ ಮಠಾಧೀಶರಿಗೆ ಇದ್ದುದಾದರೆ ರಾಜಕೀಯ ವಾತಾವರಣ ಈಗ ಕೆಟ್ಟಷ್ಟು ಖಂಡಿತಾ ಕೆಡುತ್ತಿರಲಿಲ್ಲ, ಜಾತಿಯಿಂದ "ಲಿಂಗಾಯತ"ರಾಗಿರುವ ಶ್ರೀ ಯಡಿಯೂರಪ್ಪನವರ ನಂಬಿಕೆ ಮತ್ತು ಆಚರಣೆಗಳು ತಮ್ಮ ಧರ್ಮಕ್ಕೆ ಸಂಪೂರ್ಣ ಹೊರತಾಗಿ, ಅಕ್ಕಪಕ್ಕ ಇಬ್ಬರು ಮಠಾಧೀಶರನ್ನು ಇರಿಸಿಕೊಂಡು ಅವರು ಮಾಟಮಂತ್ರದ ಭಯವನ್ನು ವ್ಯಕ್ತ ಪಡಿಸಿದಾಗ ಆ ಗುರುದ್ವಯರು ಕಿವಿ ಹಿಂಡುವುದಿರಲಿ ತಮ್ಮ "ಗುರುಬಲ" ಮಾಟಮಂತ್ರದ ವಿರುದ್ಧ ರಕ್ಷಣೆ ನೀಡುವುದೆಂಬ ಅಭಯವನ್ನೂ ನೀಡಲಿಲ್ಲ. ಅಂದಾಗ ಬುದ್ಧಿ ಹೇಳಬೇಕಾದ ಅನೇಕ ವಿಷಯ ಕುರಿತು ಧ್ವನಿ ಎತ್ತಬಲ್ಲರೆ? ಒಂದು ಸಮಾಜದ ಹಿತ ದೃಷ್ಟಿಯಿಂದ ಎಲ್ಲ ಪಕ್ಷಗಳೂ ಬೇಕು, ಎಲ್ಲ ಜಾತಿಮತಧರ್ಮಗಳವರೂ ಬೇಕು. ಅಪರೇಷನ್ ಕಮಲದಂತಹ ವ್ಯಾಪಾರಿ ಚಟುವಟಿಕೆಯನ್ನು ಅನ್ಯ ಪಕ್ಷದವರೂ ಮಾಡಿದರೆ ಆಗ ವ್ಯಾಪಾರಿ ಸರಕಾಗಿರುವ ಶಾಸಕರು 'ಜಾತಿ' ಅಭಿಮಾನ ಬಿಟ್ಟು ಧನಾಭಿಮಾನ ಪ್ರೇರಿತರಾಗಿ ಜಿಗಿದು, ಪಕ್ಷಾಡಳಿತ ಬದಲಾದರೆ 'ಲಿಂಗಾಯತ'ರು ತಮ್ಮ ಪಕ್ಷ ವಿರೋಧಿಗಳು ಎಂಬ ಪೂರ್ವಾಗ್ರಹ ಬೆಳೆಸಿಕೊಂಡ ಅಧಿಕಾರಸ್ಥರಿಂದ ಸಮಾಜಕ್ಕೆ ತೊಂದರೆಯಾಗದೆ? ಬಹಿರಂಗವಾಗಿ ಬಿಜೆಪಿಗೆ ಜಾತಿ ಬೆಂಬಲವನ್ನು ವ್ಯಕ್ತಪಡಿಸಿದ್ದು ಎಷ್ಟರ ಮಟ್ಟಿಗೆ ಸರಿ? ಸ್ವಜನಪಕ್ಷಪಾತ, ಬಂಧು ಪ್ರೇಮ, ಡೀ-ನೋಟಿಫಿಕೇಷನ್ ಹಗರಣ, ಗಣಿಗಾರಿಕೆಯ ಅಕ್ರಮ-ಇತ್ಯಾದಿ ಆರೋಪಗಳನ್ನು

ಎದುರಿಸುತ್ತಿರುವ ಮುಖ್ಯಮಂತ್ರಿಗಳನ್ನು ಸಾರಾಸಗಟಾಗಿ ಬೆಂಬಲಿಸುವ ವೀರಶೈವ ಮಹಾಸಭೆಯ ಒತ್ತಾಸೆ ಸ್ವಾಭಿಮಾನಿ ಸಂಸ್ಕೃತಿಯ ಶರಣ ಪರಂಪರೆಗೆ ಅಪಮಾನಕಾರವಲ್ಲವೆ? "ಪರಧನ, ಪರಸತಿ, ಪರದೈವವನೊಲ್ಲದ, ಪ್ರಜೆಗಳು ಬಂದರೆ ಗುಡಿತೋರಣವ, ಕಟ್ಟಿ ನಂಟರಿಷ್ಟರು ಬಂದರೆ ಸಮಯವಿಲ್ಲ, ಅತ್ತ ಸರಿಯಿರಿ" ಎಂಬ ಬಸವ ತತ್ತ್ವಕ್ಕೆ ಕಳಂಕ ತರುವಂಥದಲ್ಲವೆ?

ಬಸವ ಧರ್ಮದ ಉಳಿವಿಗಾಗಿ ಧ್ರುವೀಕರಣ

"ಗುರು-ವಿರಕ್ತರು ಒಂದೇ ವೇದಿಕೆಯ ಮೇಲೆ ಬಂದುದು, ಭಿನ್ನವಿಚಾರದ ಸ್ವಾಮಿಗಳು ಒಂದುಗೂಡಿದುದು ಮಹತ್ವದ ಸಾಧನೆ; ಇದು ಯಡಿಯೂರಪ್ಪನವರ ಪ್ರಯತ್ನ" ಎಂದು ಒಂದು ಪತ್ರಿಕೆಯಲ್ಲಿ ಬಂದಿದೆ. ಅಂತರಿಕವಾಗಿ ಬಸವ ತತ್ತ್ವದ ವಿರೋಧಿಗಳೇ ಆಗಿದ್ದವರು ಈಗ ಬಹಿರಂಗವಾಗಿ ಒಂದು ವೇದಿಕೆಗೆ ಬಂದಿದ್ದಾರೆ ಎಂಬುದು ಸೂರ್ಯಪ್ರಕಾಶದಷ್ಟು ಸತ್ಯ. ಕಿರೀಟ ಮೋಹಿಗಳಾದ ರಂಭಾಪುರಿ ಜಗದ್ಗುರುಗಳು, ಸದಾ ಇನ್ನುಳಿದ ಸ್ವಾಮಿಗಳಿಗಿಂತ ಎತ್ತರದ ಕುರ್ಚಿ ಬೇಕೆನ್ನುತ್ತಿದ್ದವರು. ಪ್ರಸ್ತುತ ಸಭೆಯಲ್ಲಿ ಕಿರೀಟವಿಲ್ಲದೆ ಉಳಿದ ಸ್ವಾಮಿಗಳ ಸಮಾನವಾಗಿ ಕುಳಿತಿದ್ದುದು ಇಂದಿನ ಪರಿಸ್ಥಿತಿಯಲ್ಲಿ ಗಮನಾರ್ಹವಾದರೂ ಹಾನಗಲ್ ಕುಮಾರ್ ಸ್ವಾಮಿಗಳು ವೀರಶೈವ ಮಹಾಸಭೆಯನ್ನು ಹುಟ್ಟು ಹಾಕಿದ ದೂರಾಲೋಚನೆ, ಪಂಚಪೀಠಗಳವರು ಸೃಷ್ಟಿಸಿದ ಪಂಚಾಚಾರ್ಯರ ಕಲ್ಪನೆ ಒಂದು ನೂರು ವರ್ಷಗಳ ಅವಧಿಯಲ್ಲಿ ವಿಷಗಳ್ಳಿಯಾಗಿ ಬೆಳೆದು ಗುರು ಬಸವಣ್ಣನವರ ಕೊಡುಗೆಯಾದ ಲಿಂಗಾಯತ ಧರ್ಮವನ್ನು ಕಳಾಹೀನ ಮಾಡಲು ಯತ್ನಿಸಿದ್ದು ನಗ್ನ ಸತ್ಯ. ಒಂದು ನೂರು ಬಾರಿ ಸುಳ್ಳನ್ನು ಹೇಳಿದರೆ ಅದು ಸತ್ಯ ಎಂಬ ಭ್ರಮೆ ಜನರ ಮನದಲ್ಲಿ ಮೂಡುವುದು ಎಂಬ ಗೋಬೆಲ್ ತಂತ್ರವನ್ನು ಅನುಸರಿಸುತ್ತ ಲಿಂಗಾಯತರನ್ನು ವೀರಶೈವರೆಂದು ಕರೆದು, ಪ್ರಚಾರ ಮಾಡಿ ವೀರಶೈವ ಮಹಾಸಭೆ ಮತ್ತು ಪಂಚಪೀಠದವರು ಯಶಸ್ವಿಯಾದ ಭ್ರಮೆಯಲ್ಲಿದ್ದಾರೆ.

ಪ್ರಗತಿಪರ ಚಿಂತನೆಯ, ಜಾತ್ಯತೀತ ಪರಿಕಲ್ಪನೆಯ, ಸಾಮಾಜಿಕ ನ್ಯಾಯ- ಸಮಾನತೆಗೆ ಬದ್ಧವಾದ ಬಸವಗುರು ಸಂಸ್ಥಾಪಿತ ಲಿಂಗಾಯತ ಧರ್ಮವು ವರ್ಣಾಶ್ರಮ ಆಧಾರಿತ ವೀರಶೈವ ಪಂಥದಿಂದ ಪೂರ್ತಿ ಬೇರೆಯೇ ಆದ ಪರಿಪೂರ್ಣ ಧರ್ಮ, ವಚನ ಸಾಹಿತ್ಯವನ್ನೇ ತನ್ನ ಸಂವಿಧಾನವನ್ನಾಗಿ ಉಳ್ಳ ಈ ಧರ್ಮವನ್ನು ವೀರಶೈವಾದಿಗಳಿಂದ ರಕ್ಷಿಸಬೇಕಾದ ಹೊಣೆಗಾರಿಕೆ ನಮ್ಮ ಮುಂದಿದೆ. 12ನೆಯ ಶತಮಾನದಲ್ಲಿ, ಹುಟ್ಟಿನಿಂದ ಬ್ರಾಹ್ಮಣರಾಗಿ ಸಂಸ್ಕಾರದಿಂದ ಶರಣರಾದ ಮಧುವರಸರ ಮಗಳನ್ನು ಹುಟ್ಟಿನಿಂದ ಸಮಗಾರರಾಗಿ ಸಂಸ್ಕಾರದಿಂದ ಶರಣರಾದ ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಿದಾಗ, ಹೊರಗಿನ ಪುರೋಹಿತಶಾಹಿ ಸಹಿಸಿಕೊಳ್ಳದೆ ಕಲ್ಯಾಣದಲ್ಲಿ ಕ್ರಾಂತಿಯಾಯಿತು. ಇಂದು ಒಳಗೆ ಬಂದು ಸೇರಿರುವ ವೀರಶೈವ ಪರೋಹಿತಶಾಹಿ ಬಸವ ಕ್ರಾಂತಿಯ ಮೂಲ ಆಶಯವನ್ನೇ ನಾಶ ಮಾಡುತ್ತಿದೆ. ಅಂಥದೊಂದು ಸಂಚು ಈಗ ಜರುಗಿದ ವೀರಶೈವ ಅಧಿವೇಶನ.

ಆದ್ದರಿಂದ ಇಂದು ಬಸವ ತತ್ತ್ವ ಮತ್ತು ವಚನ ಸಾಹಿತ್ಯದ ಸಂರಕ್ಷಣೆ, ಲಿಂಗಾಯತ ಸಮಾಜದ ತಾತ್ತ್ವಿಕ ಶುದ್ಧೀಕರಣ ಕೇವಲ ಲಿಂಗಾಯತರ ಜವಾಬ್ದಾರಿ ಮಾತ್ರವಾಗಿರದೆ ನಮ್ಮ ದೇಶದ ಸಂವಿಧಾನ ಆಶಿಸುವ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯಗಳ ಪ್ರತಿಷ್ಠಾಪನೆಗಾಗಿ ಆಗಿದೆ.

ಬಸವ ವಚನಾಮೃತ

574.ಉಣ್ಣದೆ ಉಡದೆ ವ್ಯರ್ಥ ಮಾಡುವ ಕ್ರಿಯೆ.

ದಕ್ಷಯಾಗವ ನಡೆಸಲೆಂದು ಅಜಮುಖ್ಯರಾದ ಸುರರೆಲ್ಲಾ
ನೆರೆದು ಬಂದ ಬಾಯ ನೋಡಾ
ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ!
ಉಣ್ಣದೆ ಉಡದೆ ಹೊಗೆಯ ಕೈಯಲ್ಲಿ ಸತ್ತ ಅಣ್ಣಗಳ ಕೇಡ ನೋಡಾ
ಲಿಂಗದೇವಾ! -ಬ.ವ.ದೀ. 572

ಶಿವ, ವೀರಭದ್ರ, ಶಿವಭಕ್ತರು ಯಜ್ಞ ವಿರೋಧಿಗಳು. ರಾಮಾಯಣದಲ್ಲಿ ಯಜ್ಞ ಕುಂಡದಲ್ಲಿ ರಾಕ್ಷಸರು ನೀರು ಸುರಿಯುತ್ತಾರೆ, ನೀವು ರಕ್ಷಣೆ ನೀಡಿರಿ ಎಂದು ರಾಮ ಲಕ್ಷ್ಮಣರನ್ನು ಋಷಿಗಳು ಕರೆದೊಯ್ಯುವುದನ್ನು ಕಾಣುತ್ತೇವೆ. ರಾಕ್ಷಸರು ಎಂದು ಆರ್ಯರು ಕರೆದವರು ಕಪ್ಪು ಮೈಚರ್ಮದ ದ್ರಾವಿಡ ಜನರು, ಶಿವಭಕ್ತರೇ ವಿನಾ ಇವರು ಚಿತ್ರಿಸುವಂತೆ ಕೋರೆಹಲ್ಲು ಉಳ್ಳವರಲ್ಲ. ಅವರು ಯಜ್ಞವಿರೋಧಿಗಳಿದ್ದುದರಿಂದ ಅಗ್ನಿಕುಂಡಗಳಲ್ಲಿ ನೀರು ಸುರಿಯುತ್ತಿದ್ದರು.

ಶಿವನ ತತ್ವಕ್ಕೆ ವಿರುದ್ಧವಾಗಿ ದಕ್ಷಬ್ರಹ್ಮನು, ಶಿವನ ಮಾವನು ಉದ್ದೇಶ ಪೂರ್ವಕವಾಗಿಯೇ ಯಜ್ಞವನ್ನು ಏರ್ಪಡಿಸಿ, ಶಿವನನ್ನು ಬಿಟ್ಟು ಉಳಿದ ಸುರರಿಗೆಲ್ಲ ಆಹ್ವಾನ ನೀಡಿದನು. ಭೂರಿ ಭೋಜನ, ದಕ್ಷಿಣೆಯ ಆಸೆಗಾಗಿ ಸುರರೆಲ್ಲ ಸಮಾವೇಶವಾದರು. ಬಗೆಬಗೆಯ ಯಜ್ಞಗಳಲ್ಲಿ ತುಪ್ಪ ಮತ್ತು ಕಡುಬು (ಮೋದಕ) ಮುಂತಾದ ತಿನ್ನುಣ್ಣುವ ಪದಾರ್ಥಗಳನ್ನು ಸುಡಲಾಗುವುದು. ತಿನ್ನುವ ಬಾಯಿಗಳಿಗೆ (ಹಸಿದ ಹೊಟ್ಟೆಗಳಿಗೆ) ವಂಚನೆ ಮಾಡಿ ಬೆಂಕಿಯ ಬಾಯಿಗೆ ಹಾಕುವ ಜನರ ಪರಿಸ್ಥಿತಿ ವೀರಭದ್ರನ ಕ್ರೋಧದಿಂದ ಏನಾಯಿತು ನೋಡಿರಿ.

ಅಗ್ನಿ ಕುಂಡದಲ್ಲಿ ಹಾಕುವ ವಸ್ತುಗಳಿಂದ ಸಿಕ್ಕಾಪಟ್ಟೆ ಹೊಗೆ ಏಳುವುದು. ತಿನ್ನುವ ವಸ್ತುಗಳನ್ನು ಉಣ್ಣದೆ ಉಣಿಸದೆ, ಉಡುವ ವಸ್ತುಗಳನ್ನು ಉಡದೆ, ಉಡಿಸದೆ ಬೆಂಕಿಯಲ್ಲಿ ಹಾಕಿ ಹೊಗೆ ಕುಡಿಯುವವರನ್ನು ಕಂಡು ಗುರು ಬಸವಣ್ಣನವರು ವಿಷಾದಿಸುತ್ತಾರೆ ಮತ್ತು ಕೋಪ ತಾಳುತ್ತಾರೆ.

ಹೋಮ- ಹವನ, ಯಜ್ಞ-ಯಾಗದ ಮೂಲಕ ಧಾರ್ಮಿಕ ಕ್ರಿಯೆ ಮಾಡುವ ವಿಲಕ್ಷಣ ಸಂಪ್ರದಾಯ ವೈದಿಕ ಧರ್ಮದಲ್ಲಿ ಬೆಳೆದು ಬಂದಿದೆ. ಬುದ್ಧ, ಮಹಾವೀರ, ಬಸವಣ್ಣ, ಗುರು ನಾನಕ್ ಮುಂತಾದ ಎಲ್ಲರೂ ಇದನ್ನು ವಿರೋಧಿಸಿದ್ದಾರೆ. ಅಶ್ವಮೇಧ ಯಾಗದಲ್ಲಿ ಕುದುರೆಯನ್ನು ಬಲಿ ಕೊಡಲಾಗುವುದು. ಅಜ ಯಾಗದಲ್ಲಿ ಹೋತವನ್ನು, ಗಜಯಾಗದಲ್ಲಿ ಆನೆಯನ್ನು ಬಲಿ ಕೊಡಲಾಗುವುದು. ಪ್ರಾಣಿ ವಧೆ ಮಾಡುವ ಹಿಂಸಾತ್ಮಕ ಯಜ್ಞವಿರಲಿ, ಅಹಿಂಸಾತ್ಮಕವಾಗಿ ತಿನ್ನುಣ್ಣುವ, ಉಡುವ-ತೊಡುವ ವಸ್ತುಗಳನ್ನು ಬೆಂಕಿಯಲ್ಲಿ ಹಾಕುವ ಯಾಗವಾಗಲೀ ಎರಡನ್ನೂ ಗುರು ಬಸವಣ್ಣನವರು ವಿರೋಧಿಸಿದ್ದಾರೆ.

575. ದ್ವಂದ್ವ ನಿಲುವು

ಏನಯ್ಯಾ, ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ?

ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ!
ಲಿಂಗದೇವಯ್ಯಾ ಹೊಲೆಯರ ಬಸುರಲ್ಲಿ
ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ ಇದೆ ದೃಷ್ಟ.
-ಬ.ವ.ದೀ. 573

ಎಂಥ ವಿಚಿತ್ರ! ಪುರೋಹಿತ (ವಿಪ್ರ)ರು ನುಡಿಯುವುದು ಒಂದು ಬಗೆಯಾದರೆ ನಡೆಯುವುದು ಇನ್ನೊಂದು ರೀತಿ. ಶಾಸ್ತ್ರ ಹೇಳುವ ದಾರಿಯನ್ನು ಜನರಿಗೆ ಬೋಧಿಸುವರು. ತಾವು ಮಾತ್ರ ಅದರಂತೆ ನಡೆಯರು. ಹೀಗೇಕೆ ಇಂಥ ದ್ವಂದ್ವ ಎಂದು ಕೇಳಿದರೆ ಶಾಸ್ತ್ರದಲ್ಲಿ ಹೇಳಿರುವುದನ್ನೆಲ್ಲ ಪಾಲಿಸಲು ಆಗುವುದೆ? ಎನ್ನುವರು. ಶಾಸ್ತ್ರ ವಾಕ್ಯಗಳನ್ನು ಯಾಂತ್ರಿಕವಾಗಿ ಪಠಿಸುವರು.

ಹೊಲೆಯರ ಬಸುರಲ್ಲಿ ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ ಇದೆ ದೃಷ್ಟ ಎಂಬ ಮಾತಿನ ಅರ್ಥವೇನು ಎಂಬುದು ತಿಳಿಯುತ್ತಿಲ್ಲ. ಗೋಮಾಂಸವನ್ನು ತಿನ್ನಬೇಕೆಂಬ ಆಸೆಯಿಂದ ಅಂದು ಹೊಲೆಯರು ಮಾತ್ರ ಸತ್ತ ಗೋವಿನ ಮಾಂಸ ತಿನ್ನುತ್ತಿದ್ದುದರಿಂದ ಅವರ ಮನೆಗೆ ಹೋಗಿ ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗ ಎಂದು ಭಾವಿಸಿ ಗೋಮಾಂಸವ ಅಡಿಗೆ ಕೊಡಿರಿ ಎಂದು ಕೇಳಿ ಪಡೆಯುತ್ತಿದ್ದರೇನೋ ಎಂಬ ಸಂದೇಹ ಬರುತ್ತದೆ. ನಾನೊಂದು ಪ್ರಸಂಗ ಕುರಿತು ಕೇಳಿದ್ದೆ. ಓರ್ವ ಬ್ರಾಹ್ಮಣರ ಯುವಕ ಮೆಡಿಕಲ್ ಓದುವ ಆಸೆಯಿಂದ ಅವರ ಪರಿಚಿತರಾದ ದಲಿತರ ಮನೆಗೆ ದತ್ತುಪುತ್ರನಾಗಿ ಹೋಗಿ ಅವರ ಮಗನೆಂದು ಮೀಸಲಾತಿಯಲ್ಲಿ ಸೌಲಭ್ಯ ಪಡೆದಿದ್ದ.

ಗುರು ಬಸವಣ್ಣನವರ ನಿಲುವು ಏನೆಂದರೆ, 1.ನಡೆ ನುಡಿ ಒಂದಾಗಿರಬೇಕು ನಡೆಯಲಾಗದುದನ್ನು ನುಡಿಯಬಾರದು. ನುಡಿದ ಮೇಲೆ ಅದನ್ನು ನಡೆದು ತೋರಿಸಬೇಕು. 2.ಶಾಸ್ತ್ರಗಳು ಹೇಳಿದುದೆಲ್ಲ ಆಚರಣೆಗೆ ಅರ್ಹವಲ್ಲ. ಮಾನವೀಯತೆ, ಸತ್ಯ ಬಹಳ ಮುಖ್ಯ.

ಶಾಸ್ತ್ರದ ಆದರ್ಶ ಬೋಧಿಸುವಲ್ಲಿ ಆಕಾಶದಲ್ಲಿ ಹಾರಾಡಿ, ಆಚರಣೆ ಮಾಡುವಾಗ ಭೂಮಿಯ ಮೇಲೆ ನಡೆಯುವ ದ್ವಂದ್ವ ಬೇಡ.

576. ಶರಣರು ಅಪ್ರತಿಮರು

ಹೊಲೆಯೊಳಗೆ ಹುಟ್ಟಿ ಕುಲವನರಸುವೆ
ಎಲವೊ, ಮಾತಂಗಿಯ ಮಗ ನೀನು!
ಸತ್ತುದನೆಳೆವನೆತ್ತಣ ಹೊಲೆಯ?
ಹೊತ್ತು ತಂದು ನೀವು ಕೊಲುವಿರಿ.
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು
ನಮ್ಮ ಲಿಂಗದೇವನ ಶರಣರು
ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಮ ಚರಿತ್ರರು
ಅವರಿಗೆ ತೋರಲು ಪ್ರತಿಯಿಲ್ಲವೊ! -ಬ.ವ.ದೀ. 574

ಗುರು ಬಸವಣ್ಣನವರು ಹೊಸ ಧರ್ಮವಾಗಿ ಲಿಂಗಾಯತವನ್ನು ಕೊಟ್ಟಾಗ ಎಲ್ಲರನ್ನೂ ಅದರೊಳಕ್ಕೆ ಪ್ರೀತಿಯಿಂದ ಆಹ್ವಾನಿಸಿದರು, ಇಂಬಿಟ್ಟುಕೊಂಡರು. ಅಸ್ಪೃಶ್ಯರೂ ಹೆಚ್ಚಿನ ದೀಕ್ಷೆಯನ್ನು ಪಡೆದು ಸಾಮಾಜಿಕವಾಗಿ, ಧಾರ್ಮಿಕವಾಗಿ ತಮ್ಮ ಸ್ಥಾನವನ್ನು ಉನ್ನತೀಕರಿಸಿ ಕೊಳ್ಳುತ್ತಿದ್ದರು. ಅವರಿಗೆ ಅನುಭವ ಮಂಟಪದಲ್ಲಿ ಪ್ರವೇಶ, ಸಾಮಾಜಿಕ ಸಮಾನತೆ ಧಾರ್ಮಿಕ ಸಮಾನತೆ ಲಭ್ಯವಾಗುತ್ತಿತ್ತು. ಇದರಿಂದ ಕಣ್ಣು ಕೆಂಪಗೆ ಮಾಡಿಕೊಳ್ಳುತ್ತಿದ್ದ ಸಂಪ್ರದಾಯವಾದಿಗಳು ಪೂರ್ವದ ಜಾತಿಯನ್ನು ಎತ್ತಿ ಆಡುತ್ತಿದ್ದರು. ಅಂಥ ಜಾತಿವಾದಿಗಳಿಗೆ ಗುರು ಬಸವಣ್ಣನವರು ಇಲ್ಲಿ ತಿವಿದು ಹೇಳುತ್ತಿದ್ದಾರೆ. ಎಲ್ಲರೂ ಹುಟ್ಟುವುದು ಹೊಲೆಯಲ್ಲಿಯೆ! ಹಾಗಿದ್ದರೂ ಮನುಜಾ ಏಕೆ ಮಾನವರಲ್ಲಿ ಕುಲ(ಜಾತಿ)ವ ಅರಸುತ್ತೀಯೆ? ಸತ್ತ ಪ್ರಾಣಿಯನ್ನು ಹೊತ್ತೊಯ್ದು ಊರನ್ನು ಶುಚಿಯಾಗಿ ಇಡುವ ಮುಗ್ಧ ಕಾಯಕ ಜೀವಿಯನ್ನು ಹೊಲೆಯನೆಂದು ವಿಡಂಬಿಸುವೆ. ಜೀವಂತ ವಾಗಿರುವ ಹೋತವನ್ನು ಹೊತ್ತು ತಂದು ಅಮಾನುಷವಾಗಿ ಮಂತ್ರ ಹೇಳುತ್ತ ಗುದ್ದಿ ಗುದ್ದಿ ಕೊಲ್ಲುವ ವಿಪ್ರರನ್ನು ಶ್ರೇಷ್ಠರೆನ್ನುವೆ? ವೈದಿಕ ಶಾಸ್ತ್ರಗಳು ಅಜಯಾಗದ ವಿಧಾನವನ್ನು ಹೇಳಿ, ಹೋತಿಂಗೆ ಶತ್ರುಗಳಾಗಿವೆ. ನಿಮಗೆ ನಿಜವಾಗಿಯೂ ವೇದಗಳ ದಾರ್ಶನಿಕ ಸ್ವರೂಪ ತಿರುಳು ತಿಳಿಯದು.

ಅಧ್ಯಾತ್ಮಿಕ ದೀಕ್ಷೆ ಪಡೆದ ನಮ್ಮ ಶರಣರಲ್ಲಿ ಜಾತಿಯನ್ನಾಗಲಿ, ಪೂವಾಶ್ರಮವನ್ನಾಗಲಿ ಅರಸಬೇಡಿರಿ; ಅವರು ಪೂರ್ವ ಕರ್ಮ ಹರಿದುಕೊಂಡವರು ಸದಾ ಶರಣರ ಸಂಗದಲ್ಲಿ ಒಡನಾಡುವವರು, ಹೋಲಿಸಲು ಬರದ ವ್ಯಕ್ತಿತ್ವ ಉಳ್ಳವರು!

577. ಪೂರ್ವಾಗ್ರಹ ಪೀಡಿತರು

ಇಟ್ಟೆಯ ಹಣ್ಣು ನರಿ ತಿಂದು ಸೃಷ್ಟಿ ತಿರುಗುತ್ತೆಂಬಂತೆ
ಮಟ್ಟೆಯನಿಟ್ಟ ದ್ವಿಜರ ಮಾತದೇಕೆ ?
ಹಗಲುಗಾಣದ ಗೂಗೆ ಇರುಳಾಯಿತೆಂದಡೆ,
ಜಗಕ್ಕೆ ಇರುಳಪ್ಪುದೆ ಮರಳೆ ?
ಹೋಮದ ನೇಮದಲ್ಲಿ ಹೋತನ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು,
ಲಿಂಗದೇವಾ.

-ಬ.ವ.ದೀ. 575

ಒಂದು ಬಗೆಯ ಹಣ್ಣಾದ ಇಟ್ಟೆಯ ಹಣ್ಣನ್ನು ತಿಂದು ನರಿ ನಶೆ ತಲೆಗೇರಿ ಸೃಷ್ಟಿಯೇ ತಿರುಗುತ್ತಿದೆ ಎಂದು ಬೊಬ್ಬೆ ಇಡುತ್ತದೆ. ಅದೇ ರೀತಿ ಮಣ್ಣನ್ನು ಕಲೆಸಿ ದೇಹದ ಮೇಲೆ ಬಳಿದು ಕೊಳ್ಳುವ ವಿಪ್ರರು ಶಾಸ್ತ್ರಗಳನ್ನು ಓದಿ ಭ್ರಾಂತರಾಗಿ ಸನಾತನ ಧರ್ಮಕ್ಕೆ ವಿಪತ್ತು ಬಂದಿತೆಂದು ಮಾತು ಮಾತಿಗೆ ಬೊಬ್ಬೆ ಇಡುತ್ತಾರೆ. (ರಾಮಾನುಜಾಚಾರ್ಯರು ಆಗಲೇ ವಿಶಿಷ್ಟಾದ್ವೈತ ಮತವನ್ನು ಸ್ಥಾಪಿಸಿದ್ದರು. ಅವರ ಅನುಯಾಯಿಗಳು ನಾಮದ ಮಣ್ಣನ್ನು ಕಲೆಸಿ ದೇಹದ ಮೇಲೆ ಬಳೆದುಕೊಳ್ಳುತ್ತಲಿರಬಹುದು) ಹಗಲು ಕಣ್ಣು ಕಾಣದ ಗೂಗೆ ಅದು ತನಗೆ ರಾತ್ರಿಯಾದ ಕಾರಣಕ್ಕೆ ರಾತ್ರಿಯಾಯಿತು ಎಂದರೆ ಜಗತ್ತಿಗೆ ಕತ್ತಲೆಯಾಗುವುದೆ? ಹೋಮ (ಯಜ್ಞ)ದ ಸೋಗಿನಲ್ಲಿ ಹೋತವನ್ನು ಕೊಂದು ತಿನ್ನುವ, ನಾವೇನು ಹೋತವನ್ನು ತಿನ್ನುವವರೆ? ಯಜ್ಞ ಪ್ರಸಾದವನ್ನು ತಿನ್ನುತ್ತೇವೆ. ಎನ್ನುವ ಅನಾಮಿಕರ ಜೊತೆ ಮಾತನಾಡದಿರುವುದೇ ಲೇಸು.

(ಮುಂದುವರಿಯುವುದು...)

ನೆನಪಿನ ಬುತ್ತಿ ಬಿಚ್ಚಿದಾಗ -1

- ಮಾತಾಜಿ

ನಾನು ಈ ಮೊದಲೇ ಬರೆಯಬೇಕಿತ್ತು. ಪ್ರೇರಣೆ ಎಂದಿನಿಂದಲೂ ಆಗುತ್ತಿತ್ತಾದರೂ ಅದಕ್ಕೆ ಕಿವಿಗೊಡಲಿಲ್ಲ. ಹೀಗೆ ಅನ್ನುವುದಕ್ಕಿಂತಲೂ ಸಮಯ ಕೊಡಲಿಲ್ಲ ಎನ್ನುವುದು ಸೂಕ್ತ ವಾದಿತೇನೊ! ನನ್ನ ಸಂಸಾರ -ಲೌಕಿಕ ಸಂಸಾರವಲ್ಲ ಪಾರಮಾರ್ಥಿಕ ಸಂಸಾರದ ವ್ಯವಹಾರ ವಿಸ್ತಾರಗೊಂಡುದರಿಂದ ಸಾಹಿತ್ಯ ಕ್ಷೇತ್ರದ ಸಾಧನೆ ಕುಂಠಿತವಾಯಿತು ಎಂದು ಅನೇಕರ ಅಭಿಪ್ರಾಯ. ಇಲ್ಲದಿದ್ದರೆ ಹೆಪ್ಪಿಟ್ಟ ಹಾಲು, ತರಂಗಿಣಿಯಂತಹ ಮತ್ತಷ್ಟು ಕೃತಿಗಳು ಹೊರಬರುತ್ತಿದ್ದವು ಎಂದು ಅವರ ಅಳಲು. ಇದು ನೂರಕ್ಕೆ ನೂರು ಸತ್ಯ. ಆದರೆ ಧಾರ್ಮಿಕ ನೇತಾರರಾಗಿ ನಮ್ಮ ಕರ್ತವ್ಯ ಕೇವಲ ಸಾಹಿತ್ಯ ರಚನೆಯಲ್ಲಿ ಸಮಾಜ ಕಟ್ಟುವುದೂ ಅಷ್ಟೇ ಮುಖ್ಯ. ಹೀಗಾಗಿ ಸಾಹಿತ್ಯ ರಚನೆಯ ಹಂಬಲವನ್ನು ಹತ್ತಿಕ್ಕಿಕೊಂಡು ಸಂಸ್ಥೆಗಳನ್ನು ಕಟ್ಟುವ ಕಡೆ ಗಮನ ಹರಿಸಬೇಕಾಯಿತು.

ನಾನು ಈ ಮೊದಲೇ "ಆತ್ಮಕಥೆ"ಯನ್ನು ಬರೆಯಬೇಕಾಗಿತ್ತು ಎಂದು ಏಕೆ ಅನ್ನುತ್ತಿದ್ದೇನೆಂದರೆ ಬಹಳಷ್ಟು ವಿಷಯಗಳು ಸ್ಮೃತಿ ಪಟಲದಿಂದ ಮರೆಯಾಗಿವೆ. ವೃದಾಪ್ಯದ ಕಾರಣ ಒಂದಾದರೆ ದೂರದ ವಸ್ತುಗಳು ಉದಾ-ಬೆಟ್ಟ, ಗುಡ್ಡ ಮುಂತಾದವು ಅಸ್ಪಷ್ಟವಾಗಿ ಕಾಣುವುದು ಮತ್ತೊಂದು ಕಾರಣ. ನೆನಪಿನಲ್ಲಿ ಅಳಿದುಳಿದ ಸಂಗತಿಗಳನ್ನಾದರೂ ಬರೆಯೋಣ ಎಂದು ಧಾರಾವಾಹಿಯಾಗಿ "ನೆನಪಿನ ಬುತ್ತಿ ಬಿಚ್ಚಿದಾಗ" ಎಂಬ ಶೀರ್ಷಿಕೆಯಡಿಯಲ್ಲಿ ಬರೆಯಲು ನಿರ್ಧರಿಸಿದ್ದೇನೆ. ಈಗಾಗಲೇ ನಮ್ಮ ಜನ್ಮದಾತೆಯಾದ ಶರಣೆ.ಗಂಗಮ್ಮನವರು ತಮ್ಮ 75ನೆಯ ವಯಸ್ಸಿನಲ್ಲಿ "ನೆನಪಿನಾಳದಿಂದ" ಎಂಬ ಕೃತಿಯನ್ನು ರಚಿಸಿದ್ದಾರೆ. ಅದನ್ನು ನಮ್ಮ ಸಂಸ್ಥೆಯಿಂದಲೇ ಪ್ರಕಟಿಸಿದ್ದೇವೆ.

ನೆನಪು - ಪ್ರಯಾಣಿಕನೋರ್ವ ಜೊತೆಗೆ ಒಯ್ಯುವ ಬುತ್ತಿಯೇ ಸರಿ. ಅಂಥ ಬುತ್ತಿಯನ್ನು ಬಿಚ್ಚಿ ನಿಮ್ಮೊಡನೆ ಉಣ್ಣಲು ಹಂಚಿಕೊಳ್ಳುವ ಹಂಬಲ ನನ್ನದು.

ಹುಟ್ಟುವ ಪೂರ್ವದ ಅನುಭವವನ್ನು ಇತರರ ಮಾತುಗಳಿಂದಲೇ ತಿಳಿಯಬೇಕಲ್ಲವೆ? ಹುಟ್ಟುವಾಗಿನ ಪರಿಸ್ಥಿತಿಯು ಮನೆಯಲ್ಲಿ ಬಹಳ ವಿಷಾದಕಾರವಾಗಿತ್ತಂತೆ. ಪೂರ್ವಾಶ್ರಮದ ತಂದೆ ಇನ್ನೂ ಮೆಡಿಕಲ್ ಓದುತ್ತಿದ್ದರು. ಅಂಥ ಸನ್ನಿವೇಶದಲ್ಲಿ ಅವರ ಅಣ್ಣ -ಮನೆಯ ಹಿರಿಯ ಮಗ. ತಾಯಿಯನ್ನು ಅಕ್ಕನನ್ನು ಹೊರಹಾಕಿದ್ದರು. ಅವರು ಇರಲು ಆಶ್ರಯವಿಲ್ಲದೆ ಹೊಲದಲ್ಲೇ ಬಯಲಲ್ಲಿ, ಬೇಲಿಯ ಬಳಿ ಅಡಿಗೆ ಮಾಡಿಕೊಂಡಿದ್ದು ಬೆಂಗಳೂರಿನಲ್ಲಿದ್ದ ತಮ್ಮನಿಗೆ ಹೇಳಿ ಕಳಿಸಿದ್ದರು. ಅಕ್ಕ ವೀರಮ್ಮನದು ಒಂದು ದುರಂತ ಆದರೆ ಸುಖ್ಯಾಂತ ಕಂಡ ಕಥೆ. ಋತುಮತಿ ಯಾಗುವ ಪೂರ್ವದಲ್ಲೇ ಮದುವೆ ಮಾಡಿಕೊಟ್ಟಿದ್ದರು. ನೋಡಲು ಬಲು ಸುಂದರವಾದ ನಿಲುವು, ಕಟೆದ ಅಮೃತ ಶಿಲೆಯ ಮೂರ್ತಿಯಂತಹ ರೂಪ. ದುರ್ದೈವವೆಂಬಂತೆ ಹದಿನಾಲ್ಕು ವರ್ಷದ ಬಾಲಿಕೆಯಾಗಿರುವಾಗಲೇ ಗಂಡನ ಮರಣ, ವೈಧವ್ಯದ ಶಾಪ. ಗಂಡನ ಮನೆಯವರು ಬಂಗಾರವನ್ನು ಪರಿಹಾರವಾಗಿ ಕೊಟ್ಟು ಬಾಲಿಕೆಯನ್ನು ತೌರು ಮನೆಗೆ ಅಟ್ಟಿದರು. ಮುಗ್ಧ

ಮಗಳು ಮನೆಗೆ ಬಂದಾಗ ತಾಯಿಯ ಪ್ರತಿಕ್ರಿಯೆ ನಿನ್ನನ್ನು ನಾವು ಕಾಯುವುದು ಹೇಗೆ? ಎಂಬ ಮಾತು. ಹೊಸ್ತಿಲಲ್ಲೇ ಎರಡು ದಿನ ಕಾಯ್ದಳಂತೆ. ತಂದೆಯ ಮನಸ್ಸು ಕರಗಿ ಹಾಗೆ ಮಾಡಬೇಡ ರುದ್ರಾ. ಎಷ್ಟಾದರೂ ನಮ್ಮ ಮಗಳಲ್ಲವೆ ಎಂದು ಹೆಂಡತಿಯನ್ನು ಸಮಾಧಾನ ಮಾಡಿ ಮಗಳನ್ನು ಮನೆಯೊಳಕ್ಕೆ ಬಿಟ್ಟುಕೊಂಡರಂತೆ. ಈ ದೃಶ್ಯವನ್ನು ಚಿತ್ರೀಕರಿಸಿದರೆ ಆಗಿನ ಸಮಾಜದ ಪರಿಸ್ಥಿತಿ ಕಣ್ಣಿಗೆ ಕಟ್ಟುತ್ತದೆ. ಜೀವನ ಎಂದರೆ ಏನು ಎಂದರಿಯದ ಕಂದಮ್ಮಗಳಿಗೆ ಮದುವೆ. ತನ್ನದಲ್ಲದ ತಪ್ಪಿನಿಂದ ಗಂಡ ಸತ್ತರೆ ವೈಧವ್ಯದ ಶಾಪ. (ಗುರು ಬಸವಣ್ಣನವರು ಏನೆಲ್ಲ ಕ್ರಾಂತಿಕಾರಿ ವಿಚಾರಗಳನ್ನು ಬೋಧಿಸಿ ವಿಧವಾ ವಿವಾಹಕ್ಕೆ ಅವಕಾಶ ಕೊಟ್ಟಿದ್ದರೂ ಲಿಂಗಾಯತ ಸಮಾಜ ಅದ್ಯಾವುದೊಂದನ್ನೂ ಅಳವಡಿಸಿಕೊಂಡಿಲ್ಲ.) ಸ್ವಾವಲಂಬನೆಯಿಲ್ಲದೆ ಪರಾವಲಂಬನೆಯಿಲ್ಲದೆ ಪರಾವಲಂಬನೆಯಲ್ಲೇ ಇಡೀ ಜೀವನ ಕಳೆಯುವ ಪರಿಸ್ಥಿತಿ. ಇಂಥ ಚಿಕ್ಕವಯಸ್ಸಿನ ವಿಧವೆಯಾದ ಅಕ್ಕನನ್ನು, ವಿಧವೆಯನ್ನಾಗಿ ಮಾಡಿದಾಗ ಅವರು ಅಕ್ಷರಶಃ ನಿರ್ಗತಿಕರಾದರು.

ಬೆಂಗಲೂರಿನಲ್ಲಿ ಓದುತ್ತಿದ್ದ ಕಿರಿಯ ಮಗ (ಡಾ॥ಎಸ್.ಆರ್.ಬಸಪ್ಪ) ಧಾವಿಸಿ ಬಂದು ತಾಯಿ, ಅಕ್ಕನಿಗೆ ಆಶ್ರಯ ಕಲ್ಪಿಸಿದರು. ವೀರಮ್ಮ ಗಂಡನ ಮನೆಯಿಂದ ತಂದಿದ್ದ ಬಂಗಾರವನ್ನು ಮಾರಿ ಸಾಸಲಟ್ಟಿ ಗ್ರಾಮದಲ್ಲಿ ಮನೆ ಕಟ್ಟಿಸಲು ಆರಂಭಿಸಿದರು. ಚಿಕ್ಕವಳಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡ ನಮ್ಮ ಜನ್ಮದಾತೆ (ಗಂಗವ್ವ)ಯನ್ನು ಅಜ್ಜಿ ರುದ್ರಮ್ಮ ಮತ್ತು ದೊಡ್ಡಮ್ಮನಾದ ವೀರಮ್ಮನವರೇ ಸಾಕಿ, ಬೆಳೆಸಿದ್ದು. ಶ್ರೀಮಂತರ ಮನೆಯ ಮಗಳಾದರೂ ಗಂಗಮ್ಮನವರಿಗೆ ಬಡತನವಿದ್ದರೂ ಶುದ್ಧ ವಾತ್ಸಲ್ಯ ಸಿಕ್ಕುತ್ತಿದ್ದ ಅಜ್ಜಿ ದೊಡ್ಡಮ್ಮನ ಮನೆಯೇ ಬಲು ಪ್ರಿಯ. ಹೀಗಾಗಿ ಮನೆ ಕಟ್ಟಿಸುವಾಗ ಗರ್ಭಿಣಿ ಇದ್ದ ಅವರು ಗಾರೆ ಉಜ್ಜುವ ಕೆಲಸವನ್ನು ಪ್ರೀತಿಯಿಂದಲೇ ಮಾಡುತ್ತಿದ್ದರು. ಅದೇ ಮನೆಯಲ್ಲೇ ನನ್ನ ಹುಟ್ಟೂ ಸಹ ಆಯಿತು. (ದೊಡ್ಡಮ್ಮ ಕಷ್ಟಪಟ್ಟು ಕಟ್ಟಿಸಿದ ಮನೆಯನ್ನು ಸ್ವಲ್ಪ ಹಣಕ್ಕಾಗಿ ನನ್ನ ತಮ್ಮ ಪ್ರಕಾಶ ಮಾರಿಬಿಟ್ಟನು. ಕೊಂಡವರು ನಾಯಕರು. ಆದರೂ ಅವರು ಆ ಕೋಣೆಯನ್ನು ಮಾತಾಜಿ ಹುಟ್ಟಿದ ಕೋಣೆ ಎಂದು ಇಂದಿಗೂ ಶುಭ್ರವಾಗಿಟ್ಟುಕೊಂಡು ಸಂದರ್ಶಕರಿಗೆ ಭಕ್ತಿಯಿಂದ ತೋರಿಸುತ್ತಾರೆ.)

ನಾನು ಹುಟ್ಟಿದ ಕ್ಷಣ ಸರ್ಕಾರಿ ವೈದ್ಯರ ನೌಕರಿ ತಂದೆಯವರಿಗೆ ಸಿಗುತ್ತಲೇ ಎಲ್ಲರ ಸಂತೋಷಕ್ಕೆ ಪಾರವೇ ಇರಲಿಲ್ಲ. ಅಂತೂ ಸಂಕಷ್ಟಗಳ ಸರಮಾಲೆ ಕೊನೆಯಾಗುವುದೆಂಬ ಬಗ್ಗೆ ಭರವಸೆ. ನನ್ನ ಮಗಳು ಅದೃಷ್ಟವಂತೆ, ನಮ್ಮ ಮನೆಯ ಲಕ್ಷ್ಮಿ" ಎಂದು ತಂದೆಯವರು ಉದ್ಗರಿಸುತ್ತಿದ್ದರು. ಏನಾದರೂ ಕೆಲಸಕ್ಕೆ ಹೋಗುವ ಮುನ್ನ ನನ್ನ ಕೈಗೆ ದುಡ್ಡು ಕೊಟ್ಟು ಮುಟ್ಟಿಸಿಕೊಂಡು ಹೋಗುತ್ತಿದ್ದರು. "ನೀನು ಮುಟ್ಟಿಕೊಟ್ಟರೆ ವೃದ್ಧಿಯಾಗುತ್ತದೆ" ಎಂದರೆ ನನಗೆ ಸಂಕೋಚವಾಗುತ್ತಿತ್ತು. ಲಿಂ॥ ಮುಖ್ಯಮಂತ್ರಿ ನಿಜಲಿಂಗಪ್ಪನವರ ಹತ್ತಿರದ ಬಂಧು ಶರಣ. ಗುರುನಾಥ ಅಂತ ಇದ್ದರು. ಒಮ್ಮೆ ನಾನು ಕಾಲೇಜಿಗೆ ಹೋಗುವಾಗ ಹೇಳಿದರು. ನಿಮ್ಮಪ್ಪ ಬಹಳ ಸಂಕಷ್ಟದಲ್ಲಿದ್ದರು. ವೈದ್ಯರ ಕೆಲಸಕ್ಕೆ ಸರ್ಕಾರಿ ಆದೇಶ ಬಂದಾಗ ಅಲ್ಲಿ ಹೋಗಿ ಹಾಜರಾಗಲು ಬಸ್ ಛಾರ್ಜು ಅವರ

ಬಳಿ ಇರಲಿಲ್ಲ. ನನ ಹತ್ತಿರ ಸಾಲ ತಗೊಂಡು ಹೋದರು. ಆಮೇಲೆ ಎಲ್ಲ ಚೆನ್ನಾಗಿ ಆಯಿತು. ಮೊದಲನೆಯದಾಗಿ ಕೆಲಸಕ್ಕೆ ಹೋಗಿದ್ದು ಹೊಸದುರ್ಗ ತಾಲ್ಲೋಕಿನ ಮತೋಡು ಗ್ರಾಮ; ನಂತರ ಅದೇ ತಾಲ್ಲೋಕಿನ ಬೆಲಗೂರು, ಶ್ರೀರಾಮಪುರ, ರಾಮದುರ್ಗ - ಹೀಗೆಲ್ಲ ಅವರು ತಿರುಗಾಡ ತೊಡಗಿದರು. ಬೆಲಗೂರಿನಲ್ಲಿ ನಾನು ಪ್ರಾಥಮಿಕ ಶಾಲೆಗೆ ಸೇರಿದ್ದು, ವರ್ಗಾವಣೆ ಆಗುತ್ತಲಿರುವುದರಿಂದ ಶಿಕ್ಷಣ ಸರಿಯಾಗದೆಂದು ಚಿತ್ರದುರ್ಗದಲ್ಲಿ ತಾತ ಶಂಕರಪ್ಪ, ಅವರ ತಮ್ಮ ವಕೀಲರಾದ ಶಿವಣ್ಣ -ರಾಜಮ್ಮ ದಂಪತಿಗಳ ಮನೆಯಲ್ಲಿ ಬಿಟ್ಟರು. ಪ್ರಾಥಮಿಕ ಶಿಕ್ಷಣದಿಂದ ಬಿ.ಎಸ್‌ಸಿ ಪದವಿ ಪೂರ್ಣಗೊಳ್ಳುವವರೆಗೆ ಚಿತ್ರದುರ್ಗದಲ್ಲೇ ವಿದ್ಯಾಭ್ಯಾಸ ಸಾಗಿತು.

ಬಾಲ್ಯದ ಕೆಲವು ನೆನಪುಗಳು ಹಾಗೆಯೇ ಉಳಿದಿವೆ. ಬಹುಶಃ 3-4 ವರ್ಷದ ಮಗುವಾಗಿದ್ದರಬಹುದು. ಸಾಸಲಹಟ್ಟಿ ಗ್ರಾಮಕ್ಕೆ ಹೋಗಿದ್ದೆವು. ದನಗಳನ್ನು ಕಟ್ಟುವ ಕೊಟ್ಟಿಗೆಯ ಒಂದು ಮೂಲೆಯಲ್ಲಿ ನನಗೆ ಸ್ನಾನ ಮಾಡಿಸಲು ತಾಯಿ ಸಿದ್ಧವಾಗಿದ್ದಾರೆ. ಬಟ್ಟೆ ಬಿಚ್ಚುವುದಿಲ್ಲ ಎಂಬ ರಂಪ ಮಾಡುತ್ತಿದ್ದೇನೆ. ಏಕೆಂದು ಕೇಳಿದಾಗ "ಗೂಟಕ್ಕೆ ಕಟ್ಟಿದ ಹಸುವಿನ ಕರು ನೋಡುತ್ತಿದೆ. ಬಟ್ಟೆ ಬಿಚ್ಚುವುದಿಲ್ಲ ಎಂದಾಗ ಎಲ್ಲರೂ ನಕ್ಕಿದ್ದೇ ನಕ್ಕಿದ್ದು." ಅದಕ್ಕ ಮಾತು ಬರದು, ಯಾರಿಗೂ ಹೇಳುವುದಿಲ್ಲ ಎಂದು ಸಮಾಧಾನ ಮಾಡಿದರು.

ಸಮೀಪದ ಗೋನೂರು ಬಳಿ ಒಂದು ಗದ್ದೆ ಇತ್ತು. ಭತ್ತದ ಕೊಯ್ಲು ಮಾಡಿ ಎತ್ತಿನ ಗಾಡಿಯಲ್ಲಿ ತೆನೆಯನ್ನು ಒಟ್ಟಿಕೊಂಡು ಬರುವ ತಯಾರಿ ನಡೆದಿತ್ತು. ಬೆಳಿಗ್ಗೇನೆ ಗಾಡಿಯಲ್ಲಿ ಕುಳಿತು ಗದ್ದೆಗೆ ಹೋಗಲು ಉತ್ಸಾಹ ಮೇರೆವರಿದಿತ್ತು. ಮಧ್ಯಾಹ್ನ ಗದ್ದೆಯಲ್ಲೇ ಬುತ್ತಿಯ ಊಟವೂ ಆಯಿತು. ಭತ್ತದ ತೆನೆ ಒಟ್ಟಿದ್ದು ಜಾಸ್ತಿಯಾಯಿತೇನೊ. ಸ್ವಲ್ಪ ದೂರ ಹೋಗುವುದರಲ್ಲಿಯೇ ಎತ್ತುಗಳು ಕಷ್ಟಪಡತೊಡಗಿದವು. ಅವುಗಳ ಬಾಯಲ್ಲಿ ನೊರೆ ಬರತೊಡಗಿತು. ನೋಡಿ ನನಗೆ ಅತೀವ ಸಂಕಟವಾಯಿತು. ಮೊದಲಿನಿಂದಲೂ ಮೂಕ ಪ್ರಾಣಿಗಳ ಬಗ್ಗೆ ಬಹಳ ಮರುಕ. ಅಳಲು ನಾನು ಆರಂಭಿಸಿದ್ದಲ್ಲದೆ ಗಾಡಿಯಿಂದ ಕೆಳಗೆ ಇಳಿಸಲು ಹಠ ಮಾಡಿದೆ. ನಿನ್ನೊಬ್ಬಳ ಭಾರ ಕಡಿಮೆಯಾದರೆ ಆಯಿತೆ? ನಿನ್ನದೆಷ್ಟು ಭಾರ! ಇಲ್ಲಿಂದ ಅಲ್ಲಿ ತನಕ ನಡೆಯಲು ಆಗುವುದೆ? ಎಂದು ಹಿರಿಯರು ಹೇಳಿದರೂ ನನ್ನ ಹಠ ಬಿಡಲಿಲ್ಲ. ಗಾಡಿಯಿಂದ ಸ್ವಲ್ಪ ತೆನೆ ಇಳಿಸಿದ ಎತ್ತುಗಳಿಗೆ ನೀರು ಕುಡಿಸಿದ ನಂತರವೇ ಬಂಡಿ ಏರಿದ್ದು.

ಎತ್ತುಗಳಿಗೆ ಸಂಬಂಧ ಪಟ್ಟ ಒಂದು ಪ್ರಸಂಗ ನನ್ನ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ರಜೆ ಬಿಡುತ್ತಿದ್ದಂತೆಯೇ ಹಳ್ಳಿಗೆ ಹೋಗಲು ತುದಿಗಾಲ ಮೇಲೆ ನಿಂತಿರುತ್ತಿದ್ದೆವು. ವೀರಮ್ಮಜ್ಜಿ ಬಲು ಸಾಹಸಿ ಒಂದು ಸುಂದರ ತೋಟ ಮಾಡಿದ್ದರು, ಮನೆಯಲ್ಲಿ ಹೈನ ಕಟ್ಟಿದ್ದರು. ಜೀವನದಲ್ಲಿ ಎದುರಾದ ಸಂಕಷ್ಟದಿಂದ ಎದೆಗುಂದದೆ ಛಲದಿಂದ ಮುಂದೆ ಬಂದಿದ್ದರು. ಹೀಗಾಗಿ ಆರ್ಥಿಕ ಪರಿಸ್ಥಿತಿ ಸುಧಾರಿಸಿತ್ತು. ಹಳ್ಳಿಯ ಆಕರ್ಷಣೆಯ ಕೇಂದ್ರ ಬಿಂದು ತೋಟ ಅದರೊಳಗಣ ತೆಂಗು, ಅಡಿಕೆ, ವೀಳೆಯದೆಲೆ ಮನೆಯಲ್ಲಿ ಎಳ್ಳು ಹಾಕಿದ ಸಜ್ಜೆ ರೊಟ್ಟಿ, ಗಟ್ಟಿ ಕೆನೆ, ಹರಳು ಹರಳಾದ ತುಪ್ಪ ರಜೆಯಲ್ಲಿ ವೀರಮ್ಮಜ್ಜಿ ಮನೆ ಬಲು ಪ್ರಿಯ. ಚಿತ್ರದುರ್ಗದ ಸಂತೆ ಸೋಮವಾರದಂದು.

ಎತ್ತಿನ ಗಾಡಿ ಕಟ್ಟಿಕೊಂಡು ಸಂತೆಗೆ ಹೋಗಿ ವಾರಕ್ಕೆ ಬೇಕಾಗುವಷ್ಟು ಸಾಮಾನು ತೆಗೆದುಕೊಂಡು ಬರುವ ಪರಿಪಾಠವಿತ್ತು. ಪ್ರತಿವಾರ ಅಜ್ಜ ಗಾಡಿಯಲ್ಲಿ ಹೋಗುತ್ತಿತ್ತು. ಆ ವಾರ ಹೋಗಲಿಲ್ಲ. ನಂಬಿಕಸ್ಥ, ಪ್ರಾಮಾಣಿಕ ವ್ಯಕ್ತಿ ಗಂಗಣ್ಣನನ್ನು ಕಳಿಸಿದರು. ಸಾಮಾನ್ಯವಾಗಿ ಸಂತೆಗೆ ಹೋದವರು ಎಂಟೂವರೆ ಒಂಬತ್ತಕ್ಕೆ ಬಂದೇ ಬಿಡುವರು. ನಮಗೋ ಮಂಡಕ್ಕಿ, ಕಾರಾಸೇವು ಬಂದ ತಕ್ಷಣ ತಿನ್ನುವ ಆತುರ. ಗಾಡಿ ಬರಲೇ ಇಲ್ಲ ರಸ್ತೆ ಕಡೆ ಗಮನ . ರಾತ್ರಿ ಒಂದು ಗಂಟೆ ಆಗಿರಬಹುದು. ಕೊಟ್ಟಿಗೆಯಲ್ಲಿ ಕಟ್ಟಲಾಗಿದ್ದ ಎತ್ತುಗಳು ಅಂಬಾ ಎಂದು ಕೂಗತೊಡಗಿದವು. ಬಹುಶಃ ಗಾಡಿ ಬಂತೂ ಅಂತ ಕಾಣುತ್ತೆ ಎಂದುಕೊಳ್ಳುವುದರೊಳಗೆ ಗಾಡಿ ನಿಂತಿತು. ಗಾಡಿಗೆ ಕಟ್ಟಿದ್ದ ಎತ್ತುಗಳೂ ಕೂಗ ತೊಡಗಿದವು. ಹೋಗಿ ನೋಡಿದರು. ವಿಪರೀತ ಜ್ವರದಿಂದ ಬಳಲಿದ ಗಂಗಣ್ಣ ಎಚ್ಚರ ತಪ್ಪಿ ಹಿಂದಕ್ಕೆ ಒರಗಿದ್ದಾನೆ. ಎತ್ತುಗಳನ್ನು ಬಂಧಿಸಿದ ದಾರ ಸಡಲಿದೆ. ಗಾಡಿಯಲ್ಲಿ ಸಾಮಾನು ತುಂಬಿದೆ. ಎತ್ತುಗಳು ತಾವೇ ನಿಧಾನವಾಗಿ ರಸ್ತೆಯ ಬದಿಯಲ್ಲೇ ಸಾಗಿ ಚಿತ್ರದುರ್ಗದ ಸಂತೆ ಮೈದಾನದಿಂದ 7-8 ಕಿಲೋಮೀಟರ್‌ವರೆಗೆ ಗಾಡಿಯನ್ನು ಎಳೆದುಕೊಂಡು ಬಂದಿವೆ. ನೋಡಿ ಎಲ್ಲರೂ ನಿಬ್ಬೆರಗಾದರು. ಪ್ರಾಣಿಗಳ ಆ ಜ್ಞಾನ- ಅಭ್ಯಾಸದಿಂದ ಬಂದುದು ಅಗಾಧ! ರೈತರು ಎತ್ತುಗಳನ್ನು ಬಹುವಾಗಿ ಪ್ರೀತಿಸುವರು. ಮಕ್ಕಳಿಗಿಂತ ಹೆಚ್ಚಾಗಿ ಆರೈಕೆ ಮಾಡುವರು. ನಮ್ಮ ಮನೆಗಳಲ್ಲಿ ಮುದಿಯಾದ ಎತ್ತುಗಳನ್ನು ಕಸಾಯಿಖಾನೆಗೆ ಕಟುಕರಿಗೆ ಕೊಡುತ್ತಿರಲಿಲ್ಲ. ಮುದಿಯಾಗಿ ಸತ್ತರೆ ಹೊಲದಲ್ಲಿ ಸಮಧಿ ಮಾಡುತ್ತಿದ್ದರು. ಒಂದು ಕಾಲ ಇತ್ತು. ಹಾಲು -ಮೊಸರು ಅಮೃತ -ಅದನ್ನು ಮಾರಬಾರದು ಎಂದು. ಬಡವರಿಗೆ ಹಂಚುತ್ತಿದ್ದರು. ದೊಡ್ಡ ಗಡಿಗೆಯಲ್ಲಿ ಮಜ್ಜಿಗೆ ಮಾಡಿ ಸುತ್ತಲೂ ಇದ್ದ ಜನರಿಗೆ ಹಂಚುತ್ತಿದ್ದರು.

ನನ್ನ ನಂತರ ಮೂರು ವರ್ಷಕ್ಕೆ ತಮ್ಮ ಪ್ರಕಾಶ ಹುಟ್ಟಿದ. ಆ ಸಮಯದಲ್ಲಿ ತಾಯಿಯವರಿಗೆ ಕ್ಷಯ ರೋಗ ಬಂದಿತು. ಹೀಗಾಗಿ ಬಹುದೀರ್ಘ ಕಾಲ ಅವರು ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಒಂದು ಕೋಣೆಯಲ್ಲಿ ಇದ್ದು ಚಿಕಿತ್ಸೆ ಪಡೆಯಬೇಕಾಯಿತು, ತಂದೆಯವರು ತಮ್ಮ ವೃತ್ತಿಗಾಗಿ ಬೇರೆ ಬೇರೆ ಕಡೆ ಸಂಚರಿಸುತ್ತಿದ್ದರು. ಕ್ಷಯ ಪೂರ್ತಿ ವಾಸಿಯಾದ ಮೇಲೆ ಊರಿಗೆ ಹೋಗಬೇಕಾಯಿತು. ನಮ್ಮನ್ನು ಎತ್ತಿಕೊಳ್ಳುತ್ತಿರಲಿಲ್ಲ, ಮುತ್ತು ಕೊಡುತ್ತಿರಲಿಲ್ಲ. ಅವರ ತಟ್ಟೆಯಿಂದ ಊಟ ತೆಗೆದುಕೊಳ್ಳಲು ಬಿಡುತ್ತಿರಲಿಲ್ಲ, ಹತ್ತಿರ ಮಲಗಿಸಿಕೊಳ್ಳುತ್ತಿರಲಿಲ್ಲ. ಏಕೆ ಹೀಗೆ ಮಾಡ್ತಾರೆ ಎಂದು ನನಗೆ ಸಮಸ್ಯೆ. "ಕ್ಷಯದಿಂದ ನಾನು ಸತ್ತು ಹೋದರೆ ನನ್ನ ಮಕ್ಕಳು ಅನಾಥರಾಗುವರು. ಮಲತಾಯಿಯಿಂದ ಎಷ್ಟು ಕಷ್ಟ ಪಡುವರೋ!" ಎಂದು ಏನೇನೋ ಊಹಿಸಿಕೊಂಡು ಅಳುತ್ತಿರುತ್ತಿದ್ದರು. ಏಕೆಂದರೆ , ಅವರು ಬೇಗನೆ ತಾಯಿಯನ್ನು ಕಳೆದುಕೊಂಡು ಮಲತಾಯಿಯ ಕೈಯಿಂದ ಅನಾದರ ಅನುಭವಿಸಿದವರಾಗಿದ್ದರು. (ಅವರು ಬರೆದ ನೆನಪಿನಾಳ ಪುಸ್ತಕದಲ್ಲಿ ಹೃದಯಂಗಮ ಚಿತ್ರಿಸಿದ್ದಾರೆ.) ಅಂತೂ ಕ್ಷಯವು ಪೂರ್ತಿಯಾಗಿ ವಾಸಿಯಾಯಿತು.

ಅವರ ಪ್ರಭಾವ ನನ್ನ ಮೇಲೆ ಬಹಳವಾಯಿತು. ಸಾತ್ವಿಕ ಪ್ರವೃತ್ತಿ, ಶಾಂತ ಸ್ವಭಾವ; ಉತ್ತಮ ಸಾಹಿತ್ಯ ಅಧ್ಯಯನ ಮಾಡುತ್ತಿದ್ದ ಅವರು ದಿನಾಲೂ ಉತ್ತಮ ಕಥೆಗಳನ್ನು

ಹೇಳುತ್ತಿದ್ದರು. ಕಥೆಗಳನ್ನು ಕೇಳುತ್ತ ಆ ಪಾತ್ರಗಳೊಡನೆ ಸ್ಪಂದಿಸಿ ಅಳತೊಡಗಿದರೆ ತಾಯಿಯವರು ಸಮಾಧಾನ ಮಾಡಿ, ಇದು ಬರೀ ಕಥೆ ಅಲ್ವಾ? ಎನ್ನುತ್ತಿದ್ದರು. ಧ್ರುವನ ಕಥೆ ಕೇಳಿದ ದಿವಸವಂತೂ - ಆಗ ನನಗೆ ಐದು ವರ್ಷವಿರಬಹುದು. ರಾತ್ರಿ ಒಂದು ಹೊತ್ತಿಗೆ ಎದ್ದು ಕಾಡಿಗೆ ಹೋಗಲು ಸಿದ್ಧಳಾಗಿ ಚಿಲಕ ತೆಗೆಯಲು ಯತ್ನಿಸಿದ್ದುಂಟು. ಚಿಲಕ ಸಿಗದೆ ನಿಸ್ಸಹಾಯಕಳಾಗಿ ಬಿಕ್ಕಿ ಬಿಕ್ಕಿ ಅಳತೊಡಗಿದಾಗ ತಾಯಿಯವರಿಗೆ ಎಚ್ಚರವಾಯಿತು. ಯಾಕೆ ಬಂದೆ? ಹೊರಗೆ ಹೋಗಬೇಕಾ? ಎಂದಾಗ "ಇಲ್ಲ, ಧ್ರುವನಂತೆ ಕಾಡಿಗೆ ಹೋಗಬೇಕು." ಎಂದು ಬಿಕ್ಕಿದೆ. "ಕಾಡಿನಲ್ಲಿ ಕಾಡು ಪ್ರಾಣಿಗಳಿರುತ್ತವೆ. ಅವು ತಿಂದು ಹಾಕುತ್ತವೆ. ಎಂದು ಹೇಳಿದರು. ಧ್ರುವನೂ ಸಣ್ಣ ಹುಡುಗನೆ! ಅವನನ್ನು ತಿನ್ನಲಿಲ್ಲವೇಕೆ? ಮರುಪಶ್ನೆ, "ಆ ಕಾಲ ಸತ್ಯ ಧರ್ಮದ ಕಾಲ, ಈಗಿನಂತಲ್ಲ ದೊಡ್ಡ ವಳಾದ ಮೇಲೆ ಹೋಗುವಂತೆ." ಸಮಾಧಾನ ಮಾಡಿ ಕರೆತಂದು ಮಲಗಿಸಿದರು.

ತುಂಬಾ ಚಿಕ್ಕವರಾಗಿದ್ದಾಗ ನಡೆದ ಘಟನೆ. ಯಾರೋ ಒಬ್ಬರ ಮನೆಗೆ-ನಮ್ಮ ವಯಸ್ಸಿನ ಮಕ್ಕಳಿದ್ದರು, ಅವರು ಜೊತೆ ಆಡುತ್ತಾಡುತ್ತ ಹೋದೆವು. ದೊಡ್ಡ ಆವರಣ. ವಾಪಸ್ಸು ಬರುವಾಗ ಅಲ್ಲಿ ಒಂದು ಕಡೆ ಒವಲ್ಟೀನ್ ಡಬ್ಬದ ಒಂದು ಮುಚ್ಚಳ ಬಿದ್ದಿತ್ತು. ಅದನ್ನು ತೆಗೆದುಕೊಂಡು ಬಂದು ಆಸ್ಪತ್ರೆ ಜವಾನನಿಗೆ ಕೊಟ್ಟು ಒಂದು ಉದ್ದನೆಯ ಕಟ್ಟಿಗೆ ಅದನ್ನು ಇಟ್ಟು ಮೊಳೆ ಹೊಡೆದು ಕೊಡಲು ಕೇಳಿದೆ. ಅದು ನಮಗೆ ಕುದುರೆ -ಕಾಲು ಕೆಳಗೆ ಸಿಕ್ಕಿಸಿಕೊಂಡು ಹೋಗಲು ಅದನ್ನು ನೋಡಿ ತಾಯಿ ಕೇಳಿದರು, ಎಲ್ಲಿತ್ತು ಇದು?" "ಅವರ ಕಾಂಪೌಂಡಲ್ಲಿ." "ಇನ್ನೊಬ್ಬರ ಸಾಮಾನು ಮುಟ್ಟಬಾರದು. ಹೋಗಿ ಕ್ಷಮೆ ಕೇಳಿ ಅವರಿಗೇ ಕೊಟ್ಟು ಬಾ" ಎಂದು ತಾಕೀತು ಮಾಡಿದರು. ಒಯ್ದು ಕೊಟ್ಟಾಗ ಮನೆಯವರು ನಕ್ಕರು "ಇದೇನು, ಇಂಥ ಸಣ್ಣ ವಸ್ತು ಕೊಡಲು -ಅದೇನು ನಮ್ಮನೇದಲ್ಲ ಇಲ್ಲಿವರೆಗೂ ಬಂದೆಯಾ। ಎಂದರು. ಆದರೆ ತಾಯಿಯವರು ಈ ಬಗ್ಗೆ ಬಹಳ ಎಚ್ಚರಿಕೆ ವಹಿಸುತ್ತಿದ್ದರು. "ನಮ್ಮದನ್ನು ಇನ್ನೊಬ್ಬರಿಗೆ ಕೊಡೋಣ. ಆದರೆ ಇನ್ನೊಬ್ಬರದನ್ನು ನಾವು ಕದಿಯಬಾರದು" ಎನ್ನುತ್ತಿದ್ದರು.

ದೊಡ್ಡಪ್ಪನವರ ಹೆಂಡತಿ ಸದಾ ಕಾಯಿಲೆ ನರಳುವವರು. ಮಕ್ಕಳಿಗೆ ಸರಿಯಾಗಿ ಅಡಿಗೆ ಮಾಡಿಕೊಡುತ್ತಿರಲಿಲ್ಲ. ಅವರು ನಮ್ಮ ಮನೆಗೆ ಬಂದರೆ ತಾಯಿಯವರು ತುಂಬಾ ಉಪಚರಿಸುತ್ತಿದ್ದರು. ನಮಗೆ ತಿನ್ನಿಸಬೇಕಾದುದನ್ನು ಅವರಿಗೆ ಉಣ್ಣಿಸಿ ಕಳಿಸುತ್ತಿದ್ದರು. ಹೀಗೇಕೆ ಎಂದರೆ ನಾನು ನಿಮಗೆ ಮಾಡಿ ಕೊಡುತ್ತೇನೆ. ಅವರ ತಾಯಿ ಆರೋಗ್ಯ ಚೆನ್ನಾಗಿಲ್ಲ. ಆ ಹುಡುಗರು ಇಲ್ಲಿ ಚೆನ್ನಾಗಿ ಉಂಡು ಹೋಗಲಿ." ಸಾಮಾನ್ಯವಾಗಿ ಬೇರೆ ಮಹಿಳೆಯರು ತಮ್ಮ ಮಕ್ಕಳಿಗೆ ಕದ್ದು ಮುಚ್ಚಿ ತಿನ್ನಿಸುವರು. ಅಣ್ಣತಮ್ಮಂದಿರಲ್ಲಿ ಜಗಳ ಹುಟ್ಟುವುದೇ ಇಂಥ ಘಟನೆಗಳಿಂದ. ಆದರೆ ಈ ತಾಯಿ ಹಾಗಲ್ಲ. ನಮಗೆ ಸಮಾಧಾನ ಮಾಡಿ ಪರರ ಮಕ್ಕಳಿಗೆ ತಿನ್ನಿಸುತ್ತಿದ್ದರು. ಸಾಮಾನ್ಯವಾಗಿ ಮಕ್ಕಳಿಗೆ ತಾಯಿಯ ಕೈ ತುತ್ತಿನಷ್ಟು ರುಚಿಕರವಾದುದು ಈ ಜಗತ್ತಿನಲ್ಲಿ ಬೇರೇನೂ ಇಲ್ಲ ಎನ್ನಿಸುತ್ತದೆ. ಕಥೆ ಹೇಳುತ್ತಾ ನನಗೆ, ತಮ್ಮನಿಗೆ ಬಾಯಿಗೆ ಕೈ ತುತ್ತನ್ನು ಇಡುತ್ತಿದ್ದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ.

(ಮುಂದುವರಿಯುವುದು...)

ದೇವರ ದಾಸಿಮಯ್ಯ ವಚನಕಾರನಲ್ಲ

- ಡಾ|| ಹೆಚ್.ಚಂದ್ರಶೇಖರ್

ಎಲ್ಲಾ ಪ್ರಮುಖ ಕನ್ನಡ ದೈನಿಕಗಳಲ್ಲಿ ಆದ್ಯ ವಚನಕಾರ ದೇವರ ದಾಸೀಮಯ್ಯನ ಸಹಸ್ರಮಾನೋತ್ಸವಕ್ಕೆ ಮಾನ್ಯ ಮುಖ್ಯಮಂತ್ರಿಗಳು ಚಾಲನೆ ನೀಡಿದ ವರದಿ ಓದಿ ನನಗೆ ಅಚ್ಚರಿಯಾಯಿತು.

ದೇವರ ದಾಸಿಮಯ್ಯ ಮತ್ತು ವಚನಕಾರ ಜೇಡರದಾಸಿಮಯ್ಯ ಇಬ್ಬರೂ ಬೇರೆ ಬೇರೆ ವ್ಯಕ್ತಿಗಳು ಅನುಕ್ರಮವಾಗಿ ಒಬ್ಬನು 11ನೇ ಶತಮಾನದ ಶೈವಗುರು ಮತ್ತು ಇನ್ನೊಬ್ಬರು ಬಸವಣ್ಣನವರ ಹಿರಿಯ ಸಮಕಾಲೀನನಾದ ಜೇಡರ ದಾಸಿಮಯ್ಯ ಎಂದು ಅನುಮಾನಕ್ಕೆ ಎಡೆಯಿಲ್ಲದೆ 1970ರ ಸುಮಾರಿಗೆ ಲಿಂ||ಎಚ್.ದೇವೀರಪ್ಪ ಮತ್ತು ಪ್ರೊ.ಆರ್.ರಾಚಪ್ಪನವರು ಸಿದ್ಧಪಡಿಸಿದ್ದಾರೆ.

ದೇವರ ದಾಸಿಮಯ್ಯ ಶೈವಳಾದ ರಾಣಿ ಸುಗ್ಗಳೆಗೆ ಗುರು. ಇವನು ಜಯಸಿಂಹನ ಆಸ್ಥಾನದಲ್ಲಿ ಘಟಸರ್ಪದ ಪವಾಡವನ್ನು ಪ್ರದರ್ಶಿಸಿ ಜೈನ ಸನ್ಯಾಸಿಗಳನ್ನು ಜೈನ ಪಂಡಿತರನ್ನು ಸೋಲಿಸಿದುದಲ್ಲದೆ ಜೈನನಾಗಿದ್ದ ಜಯಸಿಂಹನನ್ನು ಶೈವವನ್ನಾಗಿ ಮತಾಂತರಗೊಳಿಸಿದನು. ಈ ದೇವರ ದಾಸೀಮಯ್ಯನಿಗೂ ಮುದನೂರಿಗೂ ಯಾವ ಬಗೆಯ ಸಂಬಂಧವಿಲ್ಲ. ಬಹುಶಃ ಇವನು ಸಿಂದಗಿ ತಾಲ್ಲೋಕಿನ ದೇವೂರು ಗ್ರಾಮದವನಿರಬಹುದೆಂದು ಸಾಧಾರ ಪೂರ್ವಕವಾಗಿ ಪ್ರೊ.ಎಂ.ಎಂ.ಕಲಬುರ್ಗಿ ಊಹಿಸುತ್ತಾರೆ. ಕೆಂಭಾವಿ ಮತ್ತು ಮುದನೂರಿನಲ್ಲಿ ಹಲವು ಸಲ ವ್ಯಾಪಕವಾಗಿ ಮತ್ತು ಆಳವಾಗಿ ಕ್ಷೇತ್ರ ಕಾರ್ಯಮಾಡಿ ಸಂಪ್ರಬಂಧಗಳನ್ನು ಪ್ರಕಟಿಸಿರುವ ನನಗೆ ಇದು ಸರಿ ಅನ್ನಿಸುತ್ತದೆ.

ಜೇಡರ ದಾಸೀಮಯ್ಯನ ಸದ್ಯಕ್ಕೆ ಸಿಕ್ಕಿರುವ ವಚನಗಳಲ್ಲಿ ಬಸವಾದಿ ವಚನಕಾರರ ಉಲ್ಲೇಖವಿಲ್ಲ ಎಂಬ ಕಾರಣಕ್ಕಾಗಿ ಇವನು ಬಸವಣ್ಣನವರಿಗಿಂತಲೂ ಕೊಂಚ ಹಿರಿಯನು ಎಂದು ಕೆಲ ವಿದ್ವಾಂಸರು ಊಹಿಸುತ್ತಾರೆ. ಆದರೆ ಅವನ ವಚನಗಳಲ್ಲಿ ಅವನು ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದನು ಎಂಬುದಕ್ಕೆ ಸ್ಪಷ್ಟ ಆಧಾರಗಳಿವೆ.

ಹಲವಾರು ಶಾಸನಗಳಲ್ಲಿ ಜೇಡರ ಕುಲತಿಳಕ ದಾಸಿಮಯ್ಯ ಎಂದೂ ಅವನ ಆರಾಧ್ಯ ದೈವ ರಾಮನಾಥ ಎಂದೂ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. (ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೋಕಿನ ಗೊಬ್ಬೂರಿನ ಶಾಸನ ಸಂ 17 ಮತ್ತು 19) ದೇವರ ದಾಸಿಮಯ್ಯನ ಶಾಸನಗಳು ಸಿಕ್ಕಿಲ್ಲ. ಅಷ್ಟೇ ಅಲ್ಲದೆ ಅಬ್ಬಲೂರಿನ ಚಿತ್ರ ಶಾಸನದಲ್ಲಿ ಜೇಡರ ದಾಸಿಮಯ್ಯ ವಸ್ತ್ರ ಕೊಡುವ ಠಾವು ಎಂದು ಬರೆಯಲಾಗಿದೆ. ಇದು ವಸ್ತ್ರವನ್ನು ದಾಸೋಹವಾಗಿ ನೀಡಿ ತವನಿಧಿಯನ್ನು ಜೇಡರ ದಾಸೀಮಯ್ಯ ಪಡೆದ ಕಥೆಯನ್ನು ನೆನೆಪಿಸುತ್ತದೆ. ನಾನು ಮುದನೂರಿನಲ್ಲಿ ಕ್ಷೇತ್ರ ಕಾರ್ಯ ಮಾಡಿ ಸಂಶೋಧನೆ ಮಾಡಿ ಜೇಡರ ದಾಸೀಮಯ್ಯನ ತವನಿಧಿಯ ಹಿಂದೆ ಇರುವ ವೈಜ್ಞಾನಿಕ ಸತ್ಯದ ಬಗ್ಗೆ 1992ರಲ್ಲಿ ದೀಪಾವಳಿ ಸಂಚಿಕೆಯೊಂದರಲ್ಲಿ ವಿವರವಾಗಿ ಚರ್ಚಿಸಿದ್ದೇನೆ.

ಜೇಡರ ದಾಸೀಮಯ್ಯನಿಗಿಂತಲೂ ಪೂರ್ವದಲ್ಲಿ ವಚನಗಳ ರಚನೆಯಾಗಿರಬಹದೆಂಬುದಕ್ಕೆ ಅವನ ವಚನಗಳಲ್ಲಿಯೇ ಸುಳಿವಿದೆ. ಆದರೆ ವಚನಕ್ಕೆ ಒಂದು ನಿಶ್ಚಿತ ಸ್ವರೂಪ ಮತ್ತು ಸತ್ವ ದೊರಕಿದ್ದ ಬಸವಣ್ಣನವರ ಕಾಲದಲ್ಲಿಯೇ ಎಂಬುದರಲ್ಲಿ ಅನುಮಾನವಿಲ್ಲ.

ಇನ್ನೂ ಹಲವಾರು ಆಧಾರಗಳನ್ನು ನೀಡಬಹುದಾದರೂ ಸ್ಥಳಾಭಾವದಿಂದಾಗಿ ಮೊಟುಕುಗೊಳಿಸಿ ಈ ರೀತಿಯಾಗಿ ಸಂಕ್ಷಿಪ್ತಗೊಳಿಸಬಹುದು:-

1. ದೇವರ ದಾಸೀಮಯ್ಯ ಕ್ರಿ.ಶ.11ನೇ ಶತಮಾನದಲ್ಲಿದ್ದ ಶೈವಗುರು ಬಹುಶಃ ಅವನು ಸನ್ಯಾಸಿ. ಅಂಥವನಿಗೆ ಜೇಡರ ದಾಸೀಮಯ್ಯ ಪುಣ್ಯಸ್ತ್ರೀ ದುಗ್ಗಳೆಯನ್ನು ಗಾಟು ಹಾಕುವುದು ಹಾಸ್ಯಾಸ್ಪದ.
2. ಜೇಡರ ದಾಸೀಮಯ್ಯನು ವಚನಕಾರನು ಬಸವಣ್ಣನವರ ಹಿರಿಯ ಸಮಕಾಲೀನ. ಇವನ ಜೀವನದಲ್ಲಿ "ತವನಿಧಿ" ಕಥೆ ಬಂದರೆ ದೇವರ ದಾಸೀಮಯ್ಯನ ಜೀವನದಲ್ಲಿ ಘಟಸರ್ಪದ ಕಥೆ ಬರುತ್ತದೆ.

ಆರಂಭದ ವರ್ಷಗಳಲ್ಲಿ ಅಂದರೆ 1950-60 ದಶಕದಲ್ಲಿ ದೇವರ ದಾಸೀಮಯ್ಯ ಮತ್ತು ಜೇಡರ ದಾಸೀಮಯ್ಯ ಎಂಬ ಎರಡು ಹೆಸರುಗಳು ಒಬ್ಬನಿಗೇ ಇರಬಹುದೆಂದು ಬಹು ಪಾಲು ವಿದ್ವಾಂಸರು ನಂಬಿದ್ದರು. ಆದರೆ 1970ರ ನಂತರ, ಎಲ್ಲಾ ವಚನ ಸಾಹಿತ್ಯದ ಸಂಶೋಧಕರು, ಇವರಿಬ್ಬರೂ ಬೇರೆ ಬೇರೆ ಎಂದು ಒಪ್ಪುತ್ತಾರೆ. ಈ ಕುರಿತು ವಿವರವಾದ ಎರಡು ಸಂಪ್ರಬಂಧಗಳು ಅನತಿ ದೂರದಲ್ಲಿ ಪ್ರಕಟವಾಗಲಿವೆ.

ಇಷ್ಟೆಲ್ಲಾ ವಿವರಗಳು ವಚನ ಸಾಹಿತ್ಯದ ಅಭ್ಯಾಸಿಗಳಿಗೆ ಗೊತ್ತಿದ್ದರೂ ಯಾರೊಬ್ಬರೂ ಚರಿತ್ರೆಯನ್ನು ತಿರುಚಿತ್ತಿರುವ ಸರ್ಕಾರದ ಈ ಕ್ರಮವನ್ನು ಪ್ರತಿಭಟಿಸದೆ ಇರುವುದು ನನಗೆ ಸೋಜಿಗದ ಸಂಗತಿ. ಕನಿಷ್ಠ ಸಮಗ್ರ ವಚನ ಸಂಪುಟಗಳ ಸಂಪಾದಕರಲ್ಲಿ ಒಬ್ಬರಾದರೂ ಪ್ರತಿಭಟಿಸಲಿಲ್ಲ. ಇದು ನೋವಿನ ಸಂಗತಿ. ಮಾನ್ಯ ಮುಖ್ಯ ಮಂತ್ರಿಗಳಿಗೆ ಇಂಥ ಮಾರಕ ಸಲಹೆಯನ್ನು ಯಾರು ನೀಡಿದರು? ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಸರ್ವಜ್ಞರೂ ಸರ್ವಾಧಿಕಾರಿಗಳೂ ಆಗಿರುವ ಶ್ರೀ ಮನು ಬಳಿಗಾರರು ತಾವೇ ಪ್ರಕಟಿಸಿರುವ (ಅಂದರೆ ತಮ್ಮ ಇಲಾಖೆ) ಸಮಗ್ರ ವಚನ ಸಂಪುಟ (5ಮತ್ತು 7) ಗಳತ್ತ ಕಂಗಳನ್ನು ಹಾಯಿಸಿದ್ದರೆ ಇಂಥ ಪ್ರಮಾದವಾಗುತ್ತಿರಲಿಲ್ಲ. ಇದೊಂದು ವಚನ ಸಾಹಿತ್ಯದ ಚರಿತ್ರೆಯನ್ನು ತಿರುಚುವ ಪಟ್ಟಭದ್ರ ಹಿತಾಸಕ್ತಿಗಳ ಕಾರ್ಯ ಎಂಬುದು ಮೇಲ್ನೋಟಕ್ಕೆ ಸ್ಪಷ್ಟ.

ವಚನಕಾರರ ಲಿಂಗಾಯತ ವಿಚಾರ ಪ್ರಣಾಳಿಕೆ

- ಶರಣ.ಡಾ॥ಟಿ.ಆರ್.ಚಂದ್ರಶೇಖರ್

(ಮುಂದುವರಿದ ಭಾಗ.....)

ಭವಿಯ ಕಳೆದೆವೆಂಬ ಮರುಳು ಜನಂಗಳು ನೀವು ಕೇಳಿರೆ,
ಭವಿಯಲ್ಲವೆ ನಿಮ್ಮ ತನುಗುಣಾದಿಗಳು?
ಭವಿಯಲ್ಲವೆ ನಿಮ್ಮ ಮನಗುಣಾದಿಗಳು?
ಇವರೆಲ್ಲರೂ ಭವಿಯ ಹಿಡಿದು ಭವಭಾರಿಗಳಾದರು.
ನಾನು ಭವಿಯ ಪೂಜಿಸಿ ಭವನಾಸ್ತಿಯಾದೆನು ಗುಹೇಶ್ವರಾ.

ಇದು ಜನರನ್ನು ಒಳಗೊಳ್ಳುವ ಸಿದ್ಧಾಂತ. ಅದನ್ನು ಬಸವಣ್ಣನವರು ಹೀಗೆ ಪ್ರತಿಪಾದಿಸಿದ್ದಾರೆ.

ಅಪ್ಪನು ನಮ್ಮ ಮಾದಾರ ಚನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ
ಎನ್ನನೇತಕ್ಕರಿಯಿರಿ, ಕೂಡಲಸಂಗಯ್ಯಾ?

ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಕಿನ್ನರಿ ಬೊಮ್ಮಯ್ಯ,ಚಿಕ್ಕಯ್ಯ ಅವರ ಜೊತೆಯಲ್ಲಿ ತನ್ನನ್ನು ಸಮಾನವಾಗಿ ಪರಿಗಣಿಸಿ ಎಂದು ಬಸವಣ್ಣನವರು ಕೇಳುತ್ತಿದ್ದಾರೆ.

ಬಸವಣ್ಣನವರು ಮತ್ತೊಂದು ವಚನದಲ್ಲಿ ತನ್ನ ವಿಚಾರ ಪ್ರಣಾಳಿಕೆಯ ಮೂಲ ಯಾವುದು, ತನ್ನ ಅಜೆಂಡಾ ಯಾವುದು ಎಂಬುದನ್ನು ಅಂಬಲಿಯ ಪ್ರಣಾಳಿಕೆ ಮೂಲಕ ಪ್ರತಿಪಾದಿಸು ತ್ತಿದ್ದಾರೆ.

ಹಾಲ ನೇಮ, ಹಾಲ ಕೆನೆಯ ನೇಮ
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ
ಬೆಣ್ಣೆಯ ನೇಮ, ಬೆಲ್ಲದ ನೇಮ
ಅಂಬಲಿಯ ನೇಮದವರಾರನೂ ಕಾಣೆ,
ಕೂಡಲ ಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ನಮ್ಮ ಮಾದಾರ ಚನ್ನಯ್ಯ

ಇದು ಬಸವಣ್ಣನವರ ಬಹು ಮುಖ್ಯವಾದ ಸೈದ್ಧಾಂತಿಕ ವಚನವಾಗಿದೆ. ಇಲ್ಲಿ ಬಸವಣ್ಣನವರು ಹಾಲು, ಕೆನೆ, ಬೆಲ್ಲ, ಬೆಣ್ಣೆಗಳನ್ನು ಮತ್ತು ಅಂಬಲಿಯನ್ನು ಮುಖಾಮುಖಿಯಾಗಿಸುತ್ತಿದ್ದಾನೆ. ಒಂದು ಉಳ್ಳವರ ಪ್ರತೀಕವಾಗಿದ್ದರೆ ಅಂಬಲಿಯ ಉಳಿದವರ ಪ್ರತಿನಿಧಿಯಾಗಿದೆ. ಹಾಲು, ಕೆನೆ, ಬೆಲ್ಲ, ಬೆಣ್ಣೆ ಮುಂತಾದವು ಬಸಣ್ಣನವರಿಗೆ ಒಡೆಯರನ್ನು ಸಂಕೇತಿಸುವ

ಸಂಗತಿಗಳು. ಆದರೆ ಅವನ ಅಂಬಲಿಯ ನೇಮದ ಮಾದಾರ ಚನ್ನಯ್ಯನನ್ನು ನೆನೆಯುತ್ತಿದ್ದಾನೆ. ಏಕೆಂದರೆ ಅವನು ಹಾಲಿನ ಭಕ್ತನಲ್ಲ, ಅವನು ಅಂಬಲಿಯ ನೇಮದವನು. ಅಂಬಲಿಯು ಕೇವಲ ಬಡವರ ಆಹಾರ ಮಾತ್ರವಲ್ಲ, ಅದು ಒಂದು ಖಾದ್ಯ ಪದಾರ್ಥ ಮಾತ್ರವಲ್ಲ, ಅದು ಬಡವರ ದುಡಿಮೆಯನ್ನು, ಬಡವರನ್ನು, ಹಲವರ ಕೂಳನ್ನು ಸಂಕೇತಿಸುವ ಸಂಗತಿಯಾಗಿದೆ. ಬಸವಣ್ಣನವರ ಈ ಪರಿಭಾಷೆಯು ಅರ್ಥವಾಗದಿದ್ದರೆ ನಮಗೆ ವಚನ ಸಂವಿಧಾನದ, ಲಿಂಗಾಯತ ಪ್ರಣಾಳಿಕೆಯ ಮಹತ್ವವು ತಿಳಿಯುವುದಿಲ್ಲ.

ಪದಾರ್ಥ ಸಂಬಂಧಿ ಅಸಮಾನತೆಯ ಬಗ್ಗೆ ಬಸವಣ್ಣನವರು ಇಲ್ಲಿ ಮಾತನಾಡುತ್ತಿದ್ದಾರೆ. ಅವನು ತಾನು. ಅಂಬಲಿಯ ಪರ ಎಂಬುದನ್ನು ಘೋಷಿಸಿಕೊಳ್ಳುತ್ತಾರೆ. ಇದೊಂದು ವರ್ಗ ಸಂಬಂಧಗಳನ್ನು ತಿಳಿಸುವ ವಚನವಾಗಿದೆ. ಈ ಕಾರಣದಿಂದಲೇ ನಾನು ಹೇಳಿದ್ದು ಇದು ಲೌಕಿಕ ಮೀಮಾಂಸೆ.

ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ,
ಸಾಯದ ಮುನ್ನ ಸತ್ತಿಪ್ಪಿರಿ
ಎಂತಯ್ಯಾ ನಿಮ್ಮ ಲಿಂಗೈಕ್ಯದ ಪರಿ.
ಎಂತಯ್ಯಾ ನಿಮ್ಮ ಪ್ರಥಮರ ಪರಿ
ಅಂಗದ ಅವಸ್ಥೆಯಲ್ಲದೆ
ಲಿಂಗದ ಅವಸ್ಥೆ ಆರಿಗೂ ಇಲ್ಲ ಗುಹೇಶ್ವರಾ. -ಸ.ವ.ಸಂ.2

ಅಂಗದ, ದೇಹದ ಬಗ್ಗೆ ವಚನಕಾರರು ಮಾತನಾಡುತ್ತಾರೆ. ಅದು ತಿರಸ್ಕಾರಕ್ಕೆ ಕಾರಣವಾಗುವ ಸಂಗತಿಯಲ್ಲ. ಅದರ ಮೂಲಕವೇ ಜನರು ಬದುಕನ್ನು ಸಾರ್ಥಕ್ಯ ಮಾಡಿಕೊಳ್ಳಬೇಕಾಗಿದೆ. ಸತ್ತ ನಂತರದ ಸಂಗತಿಗಳಿಗಿಂತ ಬಸವಣ್ಣನವರಿಗೆ ಸಾಯುವ ಮುನ್ನಿನ ಬದುಕು ಮುಖ್ಯ. ಇದು ಬಸವಣ್ಣನವರು ಸಾರಿದ ಲೌಕಿಕ ಮೀಮಾಂಸೆ. ಸತ್ತ ಮೇಲೆ ಏನಾಗುತ್ತದೆ ಎಂಬುದರ ಬಗ್ಗೆ ಅವನು ಯೋಚಿಸುವುದಿಲ್ಲ, ವರ್ತಮಾನದ ಬದುಕಿನ ಬಗ್ಗೆ ಅವರು ಯೋಚಿಸುತ್ತಾರೆ. ಅಂಬಲಿಯನ್ನು ಕುರಿತಂತೆ ಮಾತನಾಡುವ ಬಸವಣ್ಣನವರು ಮತ್ತು ವಚನಕಾರರು 'ಒಡಲಿಚ್ಛೆ'ಯ ಬಗ್ಗೆ ಮಾತನಾಡುತ್ತಿದ್ದಾರೆ.

ಎಣ್ಣೆ ಬೇರೆ ಬತ್ತಿ ಬೇರೆ; ಎರಡೂ ಕೂಡಿ ಸೊಡರಾಯಿತ್ತು,
ಪುಣ್ಯ ಬೇರೆ, ಪಾಪ ಬೇರೆ; ಎರಡೂ ಕೂಡಿ ಒಡಲಾಗಿತ್ತು,
ಮಿಗಬಾರದು, ಮಿಗದಿರಬಾರದು
ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು
ಕಾಯ ಗುಣವಳಿದು ಮಾಯಾ ಜ್ಯೋತಿ, ವಾಯುವ ಕೂಡದ ಮುನ್ನ
ಭಕ್ತಿಯ ಮಾಡಬಲ್ಲಡೆ ಆತನೇ ದೇವ, ಗುಹೇಶ್ವರಾ.

ಕಾಯ ಗುಣವಳಿದು ಮಾಯಾಜ್ಯೋತಿ ವಾಯುವ ಕೂಡವ ಮುನ್ನ ಎಂಬ ಸಾಲಿನಲ್ಲಿ ಅಲ್ಲಮನು ವಚನ ಸಂಸ್ಕೃತಿಯ ಅಂತರ್ಯವನ್ನು, ಅದರ ಸಾರವನ್ನು ಹೀಗೆ ಮಂಡಿಸುತ್ತಿದ್ದಾರೆ.

ಸತ್ತ ಮೇಲೆ ಬೇರೊಂದು ಲೋಕವಿಲ್ಲ. ಮಾಯಾಜ್ಯೋತಿ (ಆತ್ಮ)ವಾಯುವನ್ನು ಸೇರುತ್ತದೆ. ಅಲ್ಲಿಗೆ ಮುಗಿಯಿತು. ಸ್ವರ್ಗ - ನರಕಗಳೆಂಬ ಸಂಗತಿಗಳಿಗೆ ಇಲ್ಲಿ ಅವಕಾಶವಿಲ್ಲ.

ಬಸವಣ್ಣನವರ ಪ್ರಣಾಳಿಕೆಯೇನಿದೆ, ವಿಚಾರ ಪ್ರಣಾಳಿಕೆಯೇನಿದೆ ಅದು ಪ್ರಧಾನವಾಗಿ ಜನರನ್ನು ಒಳಗೊಳ್ಳುವ ಪರಿಯದ್ದಾಗಿದೆ. ಅದು ಈ ಜಗತ್ತಿನ ಬಗ್ಗೆ, ಇಲ್ಲಿನ ಬದುಕಿನ ಬಗ್ಗೆ, ಇಲ್ಲಿನ ದಂದುಗಗಳ ಬಗ್ಗೆ, ಹಸಿವಿನ ಬಗ್ಗೆ, ಒಡಲಿನ ಬಗ್ಗೆ ಒಡಲಿಚ್ಛೆಯ ಬಗ್ಗೆ, ಕೂಲಿಯ ಬಗ್ಗೆ, ಆಹಾರದ ಬಗ್ಗೆ, ದುಡಿಮೆ ಬಗ್ಗೆ ಮಾತನಾಡುತ್ತದೆ. ದುಡಿಮೆಯ - ಕಾಯಕದ ಮೂಲಕವೇ ಬದುಕನ್ನು ಸಾರ್ಥಕ್ಯ ಮಾಡಿಕೊಳ್ಳುವ ಸರಳವಾದ ಜೀವನ ವಿಧಾನವನ್ನು ಅವರು ಪ್ರತಿಪಾದಿಸಿದರು. ಸಮಾಜದಲ್ಲಿ ಎಲ್ಲ ಭೇದ -ಭಾವಗಳನ್ನು, ಮೇಲು - ಕೀಳುಗಳನ್ನು, ಶ್ರೇಷ್ಠ -ಕನಿಷ್ಠಗಳನ್ನು, ಶುದ್ಧ-ಅಶುದ್ಧತೆಗಳನ್ನು ಮೀರುವ, ಮೀರಿ ಜನರನ್ನು ಒಳಗೊಳ್ಳುವ ಸಿದ್ಧಾಂತವನ್ನು ಬಸವಣ್ಣನವರು ಮಂಡಿಸಿದರು. ಸಮಾನತೆಯು ಅವರ ಪ್ರಣಾಳಿಕೆಯ ಅಡಿಪಾಯವಾಗಿದೆ. ಅವರು ಒಂದುತನವನ್ನು ಪ್ರತಿಪಾದಿಸುತ್ತಾರೆ.

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ,
ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ ಕೂಡಲ ಸಂಗಮದೇವಾ
ನಿಮ್ಮನರಿದಂವಗೆ.

ಇಲ್ಲಿ ಬಸವಣ್ಣನವರು ಒಂದು, ಒಂದು ಎಂಬುದನ್ನು ಪುನರಾವರ್ತಿಸುವುದರ ಮೂಲಕ ಒಂದುತನವನ್ನು, ಎಲ್ಲರನ್ನು ಒಳಗೊಳ್ಳುವ ಪರಿಯನ್ನು, ಸಮಾನತೆಯ ಮೌಲ್ಯವನ್ನು ಪ್ರತಿಪಾದಿಸುತ್ತಿದ್ದಾರೆ. ಮೊದಲನೆಯ ಸಾಲಿನಲ್ಲಿ ಅವನು ಶುದ್ಧತೆ -ಅಶುದ್ಧತೆಗಳನ್ನು ಮೀರುವ ಮಾತನಾಡುತ್ತಿದ್ದಾರೆ. ಎರಡನೆಯ ಸಾಲಿನಲ್ಲಿ ಅವರು ಪವಿತ್ರ-ಅಪವಿತ್ರತೆಗಳು ಅರ್ಥರಹಿತವೆಂದು ಹೇಳುತ್ತಿದ್ದಾರೆ. ನೀರು ಮತ್ತು ನೆಲಗಳು ಎಲ್ಲರನ್ನು ಒಳಗೊಳ್ಳುವ ಉಪಾದಿಗಳಾಗಿವೆ.

ಬಸವಣ್ಣನವರು ತಮ್ಮ ವಚನಗಳಲ್ಲಿ ನುಡಿಗಳನ್ನು ಅತ್ಯಂತ ಪ್ರಜ್ಞಾಪೂರ್ವಕವಾಗಿ ಬಳಸುತ್ತಿದ್ದಾರೆ. ಅವರು ಶೌಚ ಮತ್ತು ಆಚಮನಗಳನ್ನು ಒಟ್ಟಿಗೆ ಇಡುತ್ತಿದ್ದಾರೆ. ಹೊಲಗೇರಿ -ಶಿವಾಲಯಗಳನ್ನು ಮುಖಾಮುಖಿಯಾಗಿಸುತ್ತಾರೆ. ಇದು ನಿಜಕ್ಕೂ ಕ್ರಾಂತಿಕಾರಿಯಾದ ಸಂಗತಿಯಾಗಿದೆ. ಈ ನೆಲ, ಜಲ ಮುಂತಾದವು ಜನರು ದಿನನಿತ್ಯ ಏಗಾಡಬೇಕಾದ ಸಂಗತಿಯಾಗಿದೆ. ಬದುಕಿನ ಅವಿಭಾಜ್ಯ ಅಂಗಗಳು. ವಚನಕಾರರಿಗೆ ಜಗತ್ತು ಮಿಥ್ಯವಲ್ಲ. ಇದು ಸತ್ಯ ಮತ್ತು ನಿತ್ಯ. ಅಲ್ಲಮಪ್ರಭುಗಳು ಈ ಲೋಕದಲ್ಲಿನ ಬದುಕು ಎಷ್ಟು ಮುಖ್ಯ ಮತ್ತು ಈ ದೇಹ ಎಷ್ಟು ಪ್ರಧಾನ ಎಂಬುದನ್ನು ತಮ್ಮ ಒಂದು ವಚನದಲ್ಲಿ ಹೀಗೆ ಪ್ರತಿಪಾದಿಸಿದ್ದಾರೆ.

ಅಂಗದ ಅವಸ್ಥೆಯಿಲ್ಲದೆ ಲಿಂಗದ ಅವಸ್ಥೆ ಆರಿಗೂ ಇಲ್ಲ

ಎಂದು ಅವರು ಹೇಳುತ್ತಾರೆ. ಮುಂದುವರಿದು ಅವರು

ಅಂಗವಿಡಿದು ಅರಿವು ಅರಿವಲ್ಲದೆ
ಲಿಂಗವಿಡಿದು ಅರಿವು ಅರಿವಲ್ಲ,
ಗುರುವಿಡಿದು ಲಿಂಗ ಉಂಟೆಂಬುದು ಕಲ್ಪಿತ
ತನ್ನಿಂದ ತಾನಹುದಲ್ಲದೆ
ಗುಹೇಶ್ವರ ಲಿಂಗದಲ್ಲಿ ಹಂಗ ಹರಿಯದನ್ನಕ್ಕರ
ತಾನಾಗಬಾರದು ಕಾಣಾ ಚನ್ನಬಸವಣ್ಣಾ.

ವಚನ ಸಂಸ್ಕೃತಿಯ ಪ್ರಮುಖವಾದ ಸಂಗತಿಯೆಂದರೆ ಅದು ಲಿಂಗದೇಹಕ್ಕೆ ತನ್ನ ಪ್ರಾಣಳಿಕೆಯಲ್ಲಿ ಪ್ರಮುಖಸ್ಥಾನ ನೀಡಿದೆ. ಅಲ್ಲಿ ಸಾಧನೆಗೆ ಇರುವ ಮೂಲವೇ ದೇಹ. ಅರಿವು ಎಂಬುದು ಕೂಡಾ ವಚನಕಾರರಿಗೆ ದೇಹದ ಮೂಲಕ ಸಾಧಿಸಿಕೊಳ್ಳಬೇಕಾದ ಒಂದು ಸಂಗತಿ. ಲೋಕದ ವಿದ್ಯಮಾನಗಳ ಜೊತೆಯಲ್ಲಿ ಅನುಸಂಧಾನ ಮಾಡುತ್ತಾ ಜ್ಞಾನವನ್ನು ಉತ್ಪಾದಿಸಲಾಗುತ್ತದೆ. ಗುರು -ಲಿಂಗ ಎಂಬ ಸಂಗತಿಗಳು ಕೇವಲ ಕಲ್ಪಿತ ಅಥವಾ ಅವು ಕೇವಲ ಸಾಧನಗಳು, ಸ್ವರ್ಗವೆಂಬುದು ಗೊಡ್ಡುಹುಸಿ ಎಂಬುದು ಅವರ ನಿಲುವಾಗಿದೆ.

ಈ ಬದುಕು, ಈ ದೇಹ, ಈ ದುಡಿಮೆ, ಇದನ್ನೇ ಬಸವಣ್ಣನವರು ಪ್ರಸಾದ ಕಾಯವ ಕೆಡಿಸಲಾಗದು ಎಂದು ಹೇಳುತ್ತಾರೆ. ಮುಂದುವರಿದು ಸಂಸಾರವ ಸವೆಯ ಬಳಸುವೆನು ಎಂದೂ ಹೇಳುತ್ತಾರೆ. ಇವು ಮುಖ್ಯ ವಚನಕಾರರು ತಮ್ಮ ವಚನಗಳಲ್ಲಿ ಉಪದೇಶ ನೀಡಲಿಲ್ಲ. ಉಪದೇಶಕ್ಕೆ ಶರಣರ ಸಂವಿಧಾನದಲ್ಲಿ ಅವಕಾಶವಿಲ್ಲ. ಅದು ಗೀತೋಪದೇಶ, ಬ್ರಹ್ಮೋತ್ಸವಗಳಲ್ಲಿ ಸಾಧ್ಯ. ಅವರು ತಮ್ಮ ಅನುಭವಗಳನ್ನು ವಚನಗಳಲ್ಲಿ ಹೇಳಿಕೊಂಡಿದ್ದಾರೆ. ತಾವು ಬದುಕಿದ ಪರಿಯನ್ನು, ತಾವು ಕಂಡುಕೊಂಡ ಅರ್ಥವನ್ನು, ತಮಗೆ ಕಂಡ ಸತ್ಯವನ್ನು ವಚನಗಳಲ್ಲಿ ಮಂಡಿಸಿದ್ದಾರೆ. ತಮ್ಮ ಬದುಕೇ ಹೇಗೆ ವಿಚಾರ ಪ್ರಣಾಳಿಕೆಯಾಗಿದೆ ಎಂಬುದನ್ನವರು ವಚನಗಳಲ್ಲಿ ಹೇಳಿ ಕೊಂಡಿದ್ದಾರೆ. ಇದನ್ನೇ ವಿದ್ವಾಂದರು ಆಗುವುದು ಎನ್ನುವ ತತ್ವವೆಂದು ಹೇಳುತ್ತಾರೆ. ಈ ವಿಚಾರವನ್ನು ಅಲ್ಲಮರು ಒಂದು ವಚನದಲ್ಲಿ ಅತ್ಯಂತ ಅರ್ಥ ಪೂರ್ಣವಾಗಿ ಮಂಡಿಸಿದ್ದಾನೆ.

ಘನತರವಾದ ಚಿತ್ರದ ರೂಹ ಬರೆಯಬಹುದಲ್ಲದೆ
ಪ್ರಾಣವ ಬರೆಯಬಹುದೇ ಅಯ್ಯಾ?
ದಿವ್ಯಾಗಮಂಗಳು ಹೇಳಿದ ಕ್ರೀಯಲ್ಲಿ ದೀಕ್ಷೆಯ ಮಾಡಬಹುದಲ್ಲದೆ,
ಭಕ್ತಿಯ ಮಾಡಬಹುದೇ ಅಯ್ಯಾ?
ಪ್ರಾಣವಹ ಭಕ್ತಿಯ ತನ್ಮಯ ನೀನು.
ಈ ಗುಣವುಳ್ಳಲ್ಲಿ ನೀನಿಹೆ, ಇಲ್ಲದಲ್ಲಿ ನೀನಿಲ್ಲ, ಗುಹೇಶ್ವರಾ.

ವಚನಕಾರರಿಗೆ ಆಗುವುದು ಮುಖ್ಯ. ಅವರಿಗೆ ಅಂಗವು ಲಿಂಗವಾಗುವುದು ಮುಖ್ಯ. ಇದೇ ಆಗುವ ಮೀಮಾಂಸೆ. ತಾವು ಲಿಂಗವಾಗಬೇಕು. ಅದೇ ಬದುಕಿನ ಸಾರ್ಥಕ. ಅದೇ ಬದುಕಿನ ಸಾಧನೆ. ದೇಹವು ದೇವಾಲಯ ಆಗುವುದು ಹೇಗೆ ಎಂಬುದು ಅವರ ಮುಂದಿರುವ ಪ್ರಶ್ನೆ. ಇದು ಜಂಗಮಮುಖಿ ವಿಚಾರ. ದೇವಾಲಯ ಮಾಡುವುದು ಮುಖ್ಯವಲ್ಲ. ದೇವಾಲಯ ಆಗುವುದು ಮುಖ್ಯ.

ಜನರ ಭಾಷೆ : ಸಂಸ್ಕೃತ – ಪಾಲಿ

ಬಸವ ಮತ್ತು ವಚನಕಾರರು ಹಾಗೂ ಅವರ ವಿಚಾರಗಳು ನಮಗೆ ಇಂದಿಗೂ ಯಾಕೆ ಮುಖ್ಯವೆಂದರೆ, ಪ್ರಸ್ತುತವೆಂದರೆ, ಅರ್ಥ ಪೂರ್ಣವೆಂದರೆ ಅವರು ಜನರ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಬುದ್ಧ ಹೇಗೆ ಉಳ್ಳವರ – ಉನ್ನತ ವರ್ಗದವರ ಭಾಷೆಯಾಗಿದ್ದ ದೇವಭಾಷೆ ಸಂಸ್ಕೃತಕ್ಕೆ ಪ್ರತಿಯಾಗಿ ಜನರ ಭಾಷೆಯಾದ ಪಾಲಿಯಲ್ಲಿ ತನ್ನ ವಿಚಾರಗಳನ್ನು ಮಂಡಿಸಿದನೋ ಅದೇ ರೀತಿಯಲ್ಲಿ ವಚನಕಾರರು ಕೂಡ ಜನರ ಭಾಷೆಯಾದ ಕನ್ನಡದಲ್ಲಿ ವಚನಗಳನ್ನು ರಚಿಸಿದರು. ಈ ಬಗ್ಗೆ ಬಸವಣ್ಣನವರ ವಿಚಾರ ಹೀಗಿದೆ:

ಜಂಬೂ ದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ,
ಕೊಲುವೆನೆಂಬ ಭಾಷೆ ದೇವನದು
ಗೆಲುವೆನೆಂಬ ಭಾಷೆ ಭಕ್ತನದು
ಸತ್ಯವೆಂಬ ಕೂರಲಗನೇ ತಳೆದುಕೊಂಡು
ಸದ್ಭಕ್ತರು ಗೆದ್ದರು ಕಾಣಾ ಕೂಡಲಸಂಗಮದೇವಾ

ಬಸವಣ್ಣನವರದು ಗೆಲುವಿನ ಭಾಷೆ. ಅದು ದೇವ ಭಾಷೆಯಲ್ಲ. ಅವರದು ಜನರ ಭಾಷೆ. ಅವರದು ದೇವರನ್ನು ಕೂಗಿಕರೆದ ಕನ್ನಡ ಭಾಷೆಯಾಗಿದೆ. ಕನ್ನಡವು ಜನರ ಭಾಷೆ. ಅದಕ್ಕಾಗಿ ಅದು ಬಸವಣ್ಣನವರ ಭಾಷೆ. ಅದು ವಚನಕಾರರ ಭಾಷೆ. ಬಸವಣ್ಣನವರು ಸಮಾಜದ ಎಲ್ಲ ವರ್ಗದವರನ್ನೂ ಒಳಗೊಳ್ಳುವ ಮಾತುಗಳನ್ನು ಆಡುತ್ತಾರೆ. ಬಸವಣ್ಣನವರು ತನ್ನನ್ನು ತಾನು ಎಲ್ಲರೊಡನೆ ಸಮಾನವಾಗಿ ಸಮೀಕರಿಸಿಕೊಂಡು ಮಾತನಾಡುತ್ತಾರೆ. ಅಲ್ಲಿ ಯಾವ ಗಡಿರೇಖೆಗಳಿಲ್ಲ. ಅವರದು ಸ್ವಾಭಿಮಾನದಿಂದ ಕೂಡಿದ ಪ್ರಣಾಳಿಕೆಯಾಗಿದೆ.

ಕಾಯದ ಕಳವಳಕ್ಕಂಜಿ, ಕಾಯಯ್ಯ ಎನ್ನೆನು,
ಜೀವನೋಪಾಯಕ್ಕೆ ಈಯಯ್ಯಾ, ಎನ್ನೆನು,
ಉರಿ ಬರಲಿ, ಸಿರಿಬರಲಿ,
ಬೇಕು ಬೇಡೆನ್ನೆನಯ್ಯಾ
ಆ ನಿಮ್ಮ ಹಾರೆನು, ಮಾನವರ ಬೇಡೆನು
ಆಣೆ ನಿಮ್ಮಾಣೆ, ಕೂಡಲಸಂಗಮದೇವಾ.

ಬೇಡುವುದು ವಚನ ಸಂವಿಧಾನಕ್ಕೆ, ಬಸವ ಪ್ರಣಾಳಿಕೆ ವಿರುದ್ಧ. ವಚನಕಾರರು ಸ್ವಾವಲಂಬಿ ಬದುಕನ್ನು ಪ್ರತಿಪಾದಿಸಿದರು. ಅದಕ್ಕಾಗಿ ಬಸವಣ್ಣನವರು ತನ್ನಾಶ್ರಯದ ರತಿ ಸುಖವನು, ತಾನುಂಬ ಊಟವನು ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ? ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ ಮತ್ತೊಬ್ಬರ ಕೈಯಲ್ಲಿ ಮಾಡಿಸ ಬಹುದೇ? ಎಂದು ತನ್ನನ್ನು ತಾನೆ ಪ್ರಶ್ನಿಸಿಕೊಳ್ಳುತ್ತಾರೆ. ಮುಂದುವರಿದು ಇದನ್ನು ಬಸವಣ್ಣನವರು ಮತ್ತಷ್ಟು ಖಚಿತಪಡಿಸುತ್ತಾರೆ.

ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ
ಓಡಲಾಗದು ಲೆಂಕನು, ಬೇಡಲಾಗದು ಭಕ್ತನು.
ಓಡೆನಯ್ಯಾ, ಬೇಡೆನಯ್ಯಾ,
ಕೂಡಲ ಸಂಗಮದೇವಾ.

ಬೇಡುವುದು ಇಲ್ಲಿ ನಿಷಿದ್ಧ. ಇಲ್ಲಿ ನಿಷೇಧವನ್ನು ಯಾರೂ ವಿಧಿಸಿಲ್ಲ. ಆದರೆ ಅದು ವಚನ ಸಂವಿಧಾನ ಅಂತರ್ಗತ ಸಂಗತಿಯಾಗಿದೆ. ಜನರನ್ನು ಒಳಗೊಳ್ಳುವ ಅವರ ಮೀಮಾಂಸೆಯ ಸೂತ್ರವು ಬಸವಣ್ಣನವರ ಒಂದು ವಚನದಲ್ಲಿ ಹೀಗೆ ಮಂಡಿತವಾಗಿದೆ.

ಹೊಲೆಯ ಹೊಲಬಿಗನಾದರೆ
ಅವನ ಹೊರೆಯಲ್ಲಿಪ್ಪುದು ಲೇಸು ಕಂಡಯ್ಯಾ,
ಹೊಲಬುಗೆಡಬೇಡ ಲಿಂಗ ಶರಣೆನ್ನಿರಯ್ಯಾ
ಹೊಲಬುಗೆಡಬೇಡ ಶಿವಶರಣೆನ್ನಿರಯ್ಯಾ
ನಮ್ಮ ಕೂಡಲ ಸಂಗನ ಮಹಾಮನೆಯಲು
ಮಾದಾರ ಚನ್ನಯ್ಯ ಹೊಲಬಿಗನಯ್ಯಾ.

ಲಿಂಗಾಯತ ಪ್ರಣಾಳಿಕೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ವಚನಕಾರರ ವಿಚಾರ ಪ್ರಣಾಳಿಕೆಯನ್ನು ತಿಳಿದುಕೊಳ್ಳಬೇಕಾದರೆ ನಾವು ಅವರು ರೂಪಿಸಿದ್ದ ಜನರನ್ನು ಒಳಗೊಳ್ಳುವ ಸೂತ್ರವನ್ನು ಅವಶ್ಯ ತಿಳಿದುಕೊಳ್ಳಬೇಕು.

ಈ ವಚನವನ್ನು ನೋಡಿ,

ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನ್ನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ
ಕಾಗೆ, ಕೋಳಿಯಿಂದ ಕರಕಷ್ಟ ಕೂಡಲ ಸಂಗಮದೇವಾ.

ವಚನಕಾರರು ಭಕ್ತಿ ಪಕ್ಷ, ಅದು ಲಿಂಗಾಯತ ಪ್ರಣಾಳಿಕೆ. ಎಲ್ಲರನ್ನು ಒಳಗೊಳ್ಳುವುದು ಅವರ ಸಿದ್ಧಾಂತ. ಬಸವಣ್ಣನವರು ಪ್ರಜ್ಞಾಪೂರ್ವಕವಾಗಿ ಭಕ್ತಿ ಪಕ್ಷವನ್ನು ಸಂಘಟಿಸುತ್ತಿದ್ದಾರೆ. ಅವರದು ಅಲ್ಲಮರು ಹೇಳಿದಂತೆ ಬಯಲ ಸಿದ್ಧಾಂತವಾಗಿದೆ.

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ಬಯಲು ಭಾವನೆ, ಬಯಲು ಜೀವನ
ಬಯಲು ಬಯಲಾಗಿ ಬಯಲಾಯಿತಯ್ಯಾ.
ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು
ನಾ ನಿಮ್ಮನಂಬಿ ಬಯಲಾದೆ, ಗುಹೇಶ್ವರಾ.

ಈ ಬಯಲು ಎಂಬುದು ಕೊನೆ ಮೊದಲಿಲ್ಲದ ಒಂದು ಚಲನಶೀಲ ಸಂಗತಿ. ಅದಕ್ಕೆ ಮೇರೆ ಸೀಮೆಗಳಿರುವುದಿಲ್ಲ. ಅದಕ್ಕೆ ಗಡಿ ಗೋಡೆಗಳಿರುವುದಿಲ್ಲ. ಅದಕ್ಕೆ ಅಂಚು ಇಲ್ಲ. ಅದಕ್ಕೆ

ಬೇಲಿ ಇಲ್ಲ. ಅದು ಅನಂತವಾದ ಸಂಗತಿ. ಅಲ್ಲಿ ಮುಚ್ಚಿಕೊಳ್ಳುವುದು -ಬಚ್ಚಿಟ್ಟುಕೊಳ್ಳುವುದು ಏನಿಲ್ಲ. ಎಲ್ಲವೂ ಬಯಲು, ಬಯಲು ಎಂಬುದು ಮುಕ್ತತೆಯ ಸೂಚಿ. ಆಲಯವೆನ್ನುವುದು ಮುಚ್ಚಿದ ಸಂಗತಿಯಾದರೆ ಬಯಲು ಅನ್ನೋದು ತೆರದ ಸಂಗತಿಯಾಗಿದೆ. ಇದು ಲಿಂಗಾಯತ ಸಿದ್ಧಾಂತ. ಆಲಯ ಸಂಸ್ಕೃತಿಗೆ ಪ್ರತಿಯಾಗಿ ವಚನಕಾರರು ಪ್ರತಿಪಾಸಿದ್ದು ಬಯಲು ಸಿದ್ಧಾಂತ. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತೊಬ್ಬ ಶರಣ.ಅಂಬಿಗರ ಚೌಡಯ್ಯ ಆಹಾರದ ಪ್ರಣಾಳಿಕೆಯನ್ನು ಹೀಗೆ ಪ್ರತಿಪಾದಿಸುತ್ತಾರೆ.

ದೇಹಾರ ಮಾಡುವಣ್ಣಗಳಿರಾ ಅಣ್ಣಗಳಿರಾ
ಒಂದು ತುತ್ತು ಆಹಾರನಿಕ್ಕರೆ
ದೇಹಾರಕ್ಕೆ ಆಹಾರವೇ ನಿಚ್ಚಣಿಕೆ .
ದೇಹಾರ ಮಾಡುತ್ತೆ ಆಹಾರವನ್ನಿಕ್ಕಧಿದ್ದರೆ
ಆ ಹರನಿಲ್ಲೆಂದನಂಬಿಗ ಚೌಡಯ್ಯ

ಬಸವಾದಿ ವಚನಕಾರರಿಗೆ ದೇಹಾರ ಮತ್ತು ಆಹಾರ - ಎರಡರ ನಡುವೆ ಆಯ್ಕೆಯ ಪ್ರಶ್ನೆ ಬಂದರೆ ನಿಶ್ಚಯವಾಗಿ ಅವರು ಆಹಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ವಿನಾ ದೇವಾಲಯ ವನ್ನಲ್ಲ. ಇಲ್ಲಿ ಆಹಾರವನ್ನು ಇಕ್ಕುವುದು ಎಂಬುದನ್ನು ಆಧಾರವಾಗಿಟ್ಟುಕೊಂಡು ಇದು ದಾನವನ್ನು ಪೋಷಿಸುತ್ತದೆ, ಬೇಡುವುದನ್ನು ಪ್ರತಿಪಾದಿಸುತ್ತದೆ ಎಂದು ಟೀಕಿಸಬಹುದು. ಇದು ಒಂದು ಬಗೆಯ ಓದು ಎಂದರೆ ಆಹಾರ ಮತ್ತು ದೇಹಾರಗಳ ನಡುವೆ ಆಯ್ಕೆ ಮಾಡುವುದಾದರೆ ವಚನಕಾರರು ಆಹಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಓದು ನಮಗೆ ಮುಖ್ಯ.

ವಚನಕಾರರ ಲಿಂಗಾಯತ ಪ್ರಣಾಳಿಕೆಯ ಧಾತು ಸದೃಶ ಸಂಗತಿ ಯಾವುದೆಂದರೆ ಅದು ಆಹಾರ ಸಂಸ್ಕೃತಿಯೇ ವಿನಾ ಆಲಯ ಸಂಸ್ಕೃತಿಯಲ್ಲ. ಅವರದು ಆಲಸಿ ಸಂಸ್ಕೃತಿಯೂ ಅಲ್ಲ. ಅವರದು ಕಾಯಕ ಸಂಸ್ಕೃತಿ, ಅವರದು ದುಡಿಮೆಯ ಸಂಸ್ಕೃತಿ. ಅವರದು ಬೆವರಿನ ಸಂಸ್ಕೃತಿ. ಅದು ಅಂಬಲಿಯ ಮೀಮಾಂಸೆ. ಅದು ಕಾಯಕ ಜೀವಿಗಳ ಸಂಸ್ಕೃತಿ. ಅಲ್ಲಿ ಕಾಯಕವೇ ಮೊದಲು ಮತ್ತು ಅದೇ ಕೊನೆ.

ಅವರು ಮತ್ತೊಬ್ಬ ಸಹೋದ್ಯೋಗಿ ಸಿದ್ಧರಾಮಣ್ಣನವರು ಕಾಯಕದ ಮಹತ್ವವನ್ನು ಹೀಗೆ ಹೇಳಿದ್ದಾರೆ.

ಕ್ರೀಯಲ್ಲಿ ಮಗ್ನವಾದ ಬಳಿಕ
ಐಕ್ಯದ ವಿಚಾರ ಬೇಕಿಲ್ಲ;
ಗುರುವಿನ ಗದ್ದುಗೆ ಬೇಕಿಲ್ಲ.
ಗಣ ಸಮ್ಮೇಳನದ ಪೂಜೆ ಮೊದಲೆ ಬೇಕಿಲ್ಲ;
ಕಪಿಲಸಿದ್ಧ ಮಲ್ಲಿಕಾರ್ಜುನಂಗೆ ನಿನಗೆ ಭೇದವಿಲ್ಲೆಂಬುದು
ಈಗಲೇ ಬೇಕಿಲ್ಲ ಕೇಳಾ ಪ್ರಭುವೇ.

ಇದನ್ನೇ ಆಯ್ದಕ್ಕಿ ಮಾರಯ್ಯನು ಪ್ರಸಿದ್ಧವಾದ ಕಾಯಕವೇ ಕೈಲಾಸ ಎಂಬ ಮೀಮಾಂಸೆ ಯನ್ನು ಹೀಗೆ ಮಂಡಿಸಿದ್ದಾನೆ.

ಕಾಯಕದಲ್ಲಿ ನಿರತನಾದಡೆ

ಗುರು ದರ್ಶನವಾದರೂ ಮರೆಯಬೇಕು
ಲಿಂಗ ಪೂಜೆಯನ್ನಾದರೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗುಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದರೂ ಕಾಯಕದೊಳಗು.

ಅಮರೇಶ್ವರ ಲಿಂಗಕ್ಕೂ ಕಾಯಕದಿಂದ ಬಿಡುಗಡೆಯಿಲ್ಲ. ಅದೂ ಕೂಡ ಕಾಯಕದೊಳಗೆ ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು. ಗುರು, ಲಿಂಗ ಮತ್ತು ಜಂಗಮಗಳಿಗಿಂತ ವಚನಕಾರರಿಗೆ ಕಾಯಕ ಮುಖ್ಯ. ಐಕ್ಯ, ಗುರು, ಗದ್ದುಗೆ, ಗಣ ಸಮ್ಮೇಳನ ಮುಂತಾದ ಉಪಾದಿಗಳಿಗಿಂತ ಕ್ರೀ ಮುಖ್ಯ. ಸಿದ್ಧರಾಮಣ್ಣ ಮತ್ತು ಆಯ್ದಕ್ಕಿ ಮಾರಯ್ಯ ಇಬ್ಬರೂ ಒಂದೇ ಪ್ರಣಾಳಿಕೆ. ಅದಕ್ಕಾಗಿ ಬಸವಣ್ಣನವರು ಹೇಳಿದ್ದು

ಕಣ್ಣು ಮುಚ್ಚಿ ಕನ್ನಡಿಯ ತೋರುವಂತೆ
ಇರುಳು ಹಗಲಿನ ನಿದ್ರೆ ಸಾಲದೇ?
ಬೆರಳನೆಣಿಸಿ ಪರಮಾರ್ಥವ ಹಡೆವಡೆ ಚೋದ್ಯವಲ್ಲವೆ? ಹೇಳಾ
ಮೂಗ ಮುಚ್ಚಿ ಮುಕ್ತಿಯ ಬಯಸುವ ನಾಚಿಕೆಯಿಲ್ಲದವರ ನಾನೇನೆಂಬೆ
ಕೂಡಲಸಂಗಮದೇವಾ.

ಬಸವಣ್ಣನವರಿಗೆ ಅರ್ಥರಹಿತ ಆಚರಣೆಗಳಲ್ಲಿ ನಂಬಿಕೆಯಿರಲಿಲ್ಲ. ಅವುಗಳ ಅರ್ಥ ಹೀನತೆಯನ್ನು ಅವರು ಹೀಗೆ ಅಣಕಿಸಿದ್ದಾರೆ.

ನೀರ ಕಂಡಲ್ಲಿ ಮುಳುಗುವರಯ್ಯಾ
ಮರನ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವ, ಒಣಗುವ ಮರನ
ಮೆಚ್ಚಿದವರು ನಿಮ್ಮನೆತ್ತ ಬಲ್ಲರು
ಕೂಡಲ ಸಂಗಮದೇವಾ

ಪ್ರಯತ್ನ -ಪ್ರಾರಬ್ಧ:

ಬಸವಣ್ಣನವರದು ಮನುಷ್ಯ ಪ್ರಯತ್ನದಲ್ಲಿ ನೆಲೆ ನಿಂತ ವಿಚಾರವಾಗಿದೆ. ಅವರಿಗೆ ಪ್ರಾರಬ್ಧದಲ್ಲಿ ನಂಬಿಕೆಯಿಲ್ಲ. ಅವರಿಗೆ ವಿಧಿಯಲ್ಲಿ ನಂಬಿಕೆಯಿಲ್ಲ. ಪ್ರಯತ್ನ-ಪ್ರಾರಬ್ಧಗಳ ನಡುವೆ ಆಯ್ಕೆಯ ಪ್ರಶ್ನೆ ಬಂದರೆ ಅವರು ಪ್ರಯತ್ನವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ವಿನಾ ಪ್ರಾರಬ್ಧ ವನ್ನಲ್ಲ. ಈ ಬಗ್ಗೆ ಸಿದ್ಧರಾಮಣ್ಣನವರ ವಚನ ಕುತೂಹಲಕಾರಿಯಾಗಿದೆ.

ಸುಖಕ್ಕೆ ದೈವವೆಂದು, ಸುಖಕ್ಕೆ ವಿಧಿಲಿಪಿಯೆಂದು
ಸುಖಕ್ಕೆ ಪುಣ್ಯವೆಂದು, ಸುಖಕ್ಕೆ ಪ್ರಾರಬ್ಧವೆಂದು
ನುಡಿವರಯ್ಯಾ ಸಿದ್ಧಾಂತಿಗಳು
ಸುಖವೆ ದೈವವೆನಲಾಗಿ ಮಾಡುವ ಕ್ರಿಯೆಯಲ್ಲರಿಯಬಂದಿತ್ತು
ಸುಖವು ದೈವನಲ್ಲ;

ದೈವವದು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಕೂಡುವ ಕೂಟವು.

ಸುಖವು ದೈವದ ಪ್ರಸಾದದಿಂದ ಪ್ರಾಪ್ತವಾಗುವ ಸಂಗತಿಯಲ್ಲ. ಅದುಪುಣ್ಯದ ಫಲವೂ ಅಲ್ಲ. ಅದು ವಿಧಿಯಿಂದ ಒದಗುವ ವರವೂ ಅಲ್ಲ. ಅದು ಕಾಯಕದಿಂದ ಮಾತ್ರವೇ ಸಂಭವಿಸಬೇಕಾದ ಸಂಗತಿಯೆಂಬುದನ್ನು ಅವರು ಅತ್ಯಂತ ದೃಢವಾಗಿ ಪ್ರತಿಪಾದಿಸುತ್ತಾರೆ. ಪ್ರಾರಬ್ಧವನ್ನು ಇಲ್ಲಿ ಸಿದ್ಧರಾಮಣ್ಣನವರು ತಿರಿಸ್ಕರಿಸುತ್ತಿದ್ದಾರೆ. ವಚನಕಾರರದು ದುಡಿಮೆಯ ಪರಿಭಾಷೆಯಾಗಿದೆ.

ಕಬ್ಬುನ ಪರುಷವ ಮುಟ್ಟಿ
ಪರುಷವಾಗದೊಡಾ ಪರುಷಕ್ಕೆ ಕೊರತೆಯಲ್ಲವೆ?
ಅಯ್ಯಾ,ನಿಮ್ಮ ಪೂಜಿಸಿ ನೀವೆಯಾಗದೊಡೆ
ನಿಮ್ಮ ದೈವಕ್ಕೆ ಹಾನಿಯಲ್ಲವೆ!
ಅಯ್ಯಾ, ನಿಮ್ಮ ದೇವತ್ವಕ್ಕೆ ಹಾನಿಯಾಗದಂತೆ ಮಾಡಾ
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ.

ಇಲ್ಲಿ ಸಿದ್ಧರಾಮಣ್ಣನವರು ಮನುಷ್ಯ ಪ್ರಯತ್ನದ ಬಗ್ಗೆ, ಕರ್ತೃತ್ವದ ಬಗ್ಗೆ ಮಾತನಾಡುತ್ತಿದ್ದಾರೆ. ಈ ದೈವವಾಗುವ ಬಗೆಯಿದೆಯಲ್ಲಾ ಅದೇ ಸಾಧನೆ. ಅದೇ ಅಧ್ಯಾತ್ಮ. ಈ ದೈವವಾಗುವುದಕ್ಕೆ ಇರುವ ಮಾರ್ಗವೆಂದರೆ ಕಾಯಕ - ದುಡಿಮೆ, ಇಲ್ಲಿ ಆಗುವುದು -ಆಗಿಸುವುದು ಮುಖ್ಯ.ಇದನ್ನು ಅಲ್ಲಮರು ಕಾಯಗುಣವಳಿದು ಮಾಯಾ ಜ್ಯೋತಿ ವಾಯುವ ಕೂಡದ ಮುನ್ನ ಭಕ್ತಿಯ ಮಾಡಬಲ್ಲಾತನೆ ದೇವ ಎಂದು ಹೇಳುತ್ತಾರೆ. ಬಸವಣ್ಣನವರು ಎನ್ನ ದೇಹವೇ ದೇಗುಲ ಎಂದು ಹೇಳುತ್ತಾರೆ. ಅಂಬಿಗರ ಚೌಡಯ್ಯನವರು ದೇಹಾರ ಮತ್ತು ಆಹಾರಗಳ ನಡುವೆ ಆಯ್ಕೆಯ ಪ್ರಶ್ನೆಬಂದರೆ ಅವರು ಆಹಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ವಿನಾ ದೇಹಾರವನ್ನಲ್ಲ.

ಪರುಷಮಣಿಯು ಯಾವ ಲೋಹವನ್ನು ಮುಟ್ಟುತ್ತದೊ ಅದು ಚಿನ್ನವಾಗುವುದಲ್ಲದೆ ಪರುಷವಾಗುವುದಿಲ್ಲ. ಆದರೆ ಕೂಡಲ ಸಂಗಮನನ್ನು ಪೂಜಿಸಿದವರು ಕೂಡಲ ಸಂಗಮನಾಗಬೇಕು ಇಲ್ಲವೇ ಕಪಿಲಸಿದ್ಧಮಲ್ಲಿಕಾರ್ಜುನನಾಗಬೇಕು. ಅಲ್ಲದಿದ್ದರೆ ಅದು ದೈವತ್ವಕ್ಕೆ ಹಾನಿ. ಈ ದೈವವಾಗುವ ಬಗೆಯಿದೆಯಲ್ಲ ಅದೇ ಸಾಧನೆ -ಆಧ್ಯಾತ್ಮ. ಇದು ಧಾರ್ಮಿಕ ವಚನವಲ್ಲ. ಇದು ಸಾಮಾಜಿಕ ವಚನ.

ಪಾರಮಾರ್ಥಿಕತೆಯ ಮೆರೆದಾಟ

ಇಂದು ನಮ್ಮಲ್ಲಿ ಪಾರಮಾರ್ಥಿಕ ಪರಿಭಾಷೆಯು ವಿಜೃಂಭಿಸುತ್ತಿದೆ. ಆಲಯ ಸಂಸ್ಕೃತಿಯ ಅಲೆಯನ್ನು ನಾಡು ತೇಲಾಡುತ್ತದೆ. ಯಜ್ಞ-ಯಾಗ, ಹವನ -ಹವಿಸ್ಸು, ದಾನ -ದಕ್ಷಿಣೆ, ದತ್ತಿ -ಉಂಬಳಿ ಮುಂತಾದವುಗಳನ್ನು ಒಳಗೊಂಡ ರಾಜಭೋಗದಲ್ಲಿ ಸಮಾಜ ಮೆರೆದಾಡುತ್ತಿದೆ. ಈ ಪ್ರಣಾಳಿಕೆಯ ವಿರುದ್ಧ, ಈ ಪರಿಭಾಷೆಗೆ ವಿರುದ್ಧವಾಗಿ ವಚನಕಾರರು ಹೋರಾಟ ಮಾಡಿದರು. ಪಾರಮಾರ್ಥಿಕ ಪ್ರಣಾಳಿಕೆಗೆ ಪ್ರತಿಯಾಗಿ ಪದಾರ್ಥವಾದಿ ಪ್ರಣಾಳಿಕೆಯನ್ನು ವಚನಕಾರರು ಕಟ್ಟಿದರು. ಬಸವ ಕಟ್ಟಿದ್ದು ಪರಮಾರ್ಥ ಬೋಧೆಯಲ್ಲ. ಅದು ಮೂಲಭೂತವಾಗಿ ಲೌಕಿಕವಾದಿ

ಪ್ರಣಾಳಿಕೆಯಾಗಿದೆ. ಪರಮಾರ್ಥ ಎನ್ನುವುದು ಬಸವನಿಗೆ ಇಲ್ಲ. ಆಯ್ದಕ್ಕಿ ಲಕ್ಕಮ್ಮನಿಗೆ ಕೈಲಾಸವೆಂಬುದು ಮತ್ತೊಂದಿಲ್ಲ. ಇಲ್ಲಿರುವುದೇ ಕೈಲಾಸ. ಆಕೆಗೆ ದುಡಿಮೆಯ ಮೂಲಕವೇ ಕೈಲಾಸ. ಇಂದು ಹರಕೆ ಹೊರುವವರಿಗೇನು ಕೊರತೆಯಿಲ್ಲ. ದಾನ ಮಾಡುವವರಿಗೇನು ಕಡಿಮೆಯಿಲ್ಲ. ದತ್ತಿ ಕೊಡುವವರಿಗೇನು ಮಿತಿಯಿಲ್ಲ. ಈ ದಾನ, ದತ್ತಿ, ಹರಕೆಗಳ ಹಿಂದಿನ ಉದ್ದೇಶಗಳೇನು? ಅವು ಸ್ಪಷ್ಟವಾಗಿವೆ. ಮೊದಲನೆಯದಾಗಿ ಪುಣ್ಯ ಸಂಪಾದನೆಯು ದಾನ -ದಕ್ಷಿಣೆಗಳ ಮೂಲದಲ್ಲಿ ಕೆಲಸ ಮಾಡುವ ಸಂಗತಿ. ಎರಡನೆಯದಾಗಿ ಪಾಪ ಕಳೆದುಕೊಳ್ಳುವುದು ಅವುಗಳ ಹಿಂದಿನ ಮುಖ್ಯ ಗುರಿ. ಈ ಬಗೆಯ ದಾನ -ದತ್ತಿಗಳಿಂದ ಬಡತನವನ್ನು ಪೋಷಿಸುತ್ತವೆ. ಬಡತನವಿಲ್ಲದಿದ್ದರೆ ಆಗ ದಾನ, ದಕ್ಷಿಣೆ, ದತ್ತಿ, ಉಂಬಳಿಗಳಿಗೆ ವಚನ ಸಂವಿಧಾನದಲ್ಲಿ ಅವಕಾಶವಿಲ್ಲ. ಅಲ್ಲಿ ದುಡಿಮೆಗೆ ಅವಕಾಶವಿದೆ. ಅಲ್ಲಿ ಕೂಲಿಗೆ ಅವಕಾಶವಿದೆ. ಕಾಯಕ ಅನ್ನೋದು ಇಲ್ಲಿ ಚಾರಿಟಿಯಲ್ಲ. ಕಾಯವ ಬಳಲಿಸದೆ ದುಡಿದುದ್ದು ಅಲ್ಲಿ ಸಲ್ಲುವುದಿಲ್ಲ. ಜನರು ಬೆವರು ಬಸಿದು ದುಡಿಯಬೇಕು. ಜನರು ಕಣ್ಣೀರು ಹರಿಸಿ ಕಾಯಕ ಮಾಡಬೇಕು, ಜನರು ರಕ್ತ ಚೆಲ್ಲಿ ಗಳಿಸಬೇಕು. ಅದು ಕೂಡಲ ಸಂಗಮನಿಗೆ ಸಲ್ಲುತ್ತದೆ. ಬಸವಣ್ಣನವರದು ಪದಾರ್ಥವಾದಿ ಪ್ರಣಾಳಿಕೆ, ಅದು ಪರಿಶ್ರಮದ ಪ್ರಣಾಳಿಕೆ. ಪ್ರಾರಬ್ಧಕ್ಕಿಂತ ಪ್ರಯತ್ನವೇ ಇಲ್ಲಿ ಮೇಲು. ಪರಮಾರ್ಥವೆನ್ನುವುದು ಜಪ, ತಪ, ಯಜ್ಞ, ಯಾಗ, ಹವನ, ಹವಿಸ್ಸು, ಆಚರಣೆ, ಡಂಭಾಚಾರ, ಅರ್ಚನೆ, ಆರಾಧನೆ, ಷೋಡಶೋಪಚಾರ, ಷಡ್ವಿಧಾರ್ಚನೆ, ದಕ್ಷಿಣೆ ಮುಂತಾದವುಗಳಿಂದ ಪ್ರಾಪ್ತವಾಗುವ ಸಂಗತಿಯಲ್ಲ. ಆದರೆ ಇಂದು ಆಚರಣೆಗಳೇ ಮುಖ್ಯವಾಗಿ, ಆರಾಧನೆಯೇ ಪ್ರಧಾನವಾಗಿ ಪರಿಶ್ರಮ ಮೂಲೆಗುಂಪಾಗಿದೆ. ವಚನಕಾರರ ಪ್ರಕಾರ ಪರಮಾರ್ಥವೆನ್ನುವುದು ಈ ಲೋಕದಲ್ಲಿ ಮನುಷ್ಯ ಪ್ರಯತ್ನದಿಂದ ಪ್ರಾಪ್ತವಾಗುವ ಸಂಗತಿಯಾಗಿದೆ. ಅದೇ ವಚನಕಾರರ ಪ್ರಕಾರ ಕೂಡಲ ಸಂಗಮನನ್ನು ಸೇರುವ ಪರಿ. ಇದನ್ನೆ ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಅದೇ ಅಧ್ಯಾತ್ಮ. ಅಧ್ಯಾತ್ಮವೆಂದರೆ ಕಾಡಿನಲ್ಲಿ ಕುಳಿತು ತಪ್ಪಸ್ಸು ಮಾಡುವುದಲ್ಲ. ಕಾಯಕದ ಮೂಲಕದ ಬದುಕನ್ನು ಸಾರ್ಥಕ ಮಾಡಿಕೊಳ್ಳುವ ಪರಿ.

ಈ ಸಂದರ್ಭದಲ್ಲಿ ನಮ್ಮನ್ನು ನಾವು ಮತ್ತೊಮ್ಮೆ ವಚನ ಸಂವಿಧಾನಕ್ಕೆ ಕೊಟ್ಟುಕೊಳ್ಳಬೇಕಾಗಿದೆ. ಜನರೆಲ್ಲರನ್ನು ಒಳಗೊಳ್ಳುವ ರೀತಿಯಲ್ಲಿ ಸಮಾಜವನ್ನು ಕಟ್ಟುವ ಕಾಯಕಕ್ಕೆ ನಮ್ಮನ್ನು ನಾವು ಅರ್ಪಿಸಿಕೊಳ್ಳಬೇಕಾಗಿದೆ. ಇಂದು ನಮಗೆ ಜನರ ಆಹಾರ ಮುಖ್ಯವಾಗಬೇಕು. ಜನರ ಆರೋಗ್ಯ ಆದ್ಯತೆ ಆಗಬೇಕು. ಜನರ ದುಡಿಮೆ ಪ್ರಮುಖ ಸಂಗತಿಯಾಗಬೇಕು. ಲಿಂಗ ಸಮಾನತೆಯು ನಮ್ಮ ಅಜೆಂಡಾ ಆಗಬೇಕು. ಜನರನ್ನು ಒಡೆಯುವ ಎಲ್ಲ ಬಗೆಯ ತಾರತಮ್ಯವಾದ ಸಂಗತಿಗಳನ್ನು ತೊಡೆದುಹಾಕಬೇಕು. ಸಮಾಜವನ್ನು ಒಡೆಯುವ ಶಕ್ತಿಗಳಿಗೆ ಪ್ರತಿಯಾಗಿ ಜನರನ್ನು ಒಳಗೊಳ್ಳುವ ಶಕ್ತಿಗಳನ್ನು ಪೋಷಿಸುವ ಅಗತ್ಯವಿದೆ. ಇದು ಬಸವಣ್ಣನವರ ಮತ್ತು ವಚನಕಾರರ ಸಂದೇಶವಾಗಿದೆ. ಲಿಂಗ ಸಂಬಂಧಿ ಸಮಾನತೆಯನ್ನು ಅದರ ಎಲ್ಲ ಆಯಾಮಗಳೊಂದಿಗೆ ಪ್ರತಿಪಾದಿಸಿದ ಲಿಂಗಾಯತ ಪ್ರಣಾಳಿಕೆಯು ಇಂದು ನಮಗೆ ದಾರಿದೀಪವಾಗಬೇಕು. ಸಮಾಜದಲ್ಲಿನ ಪರಿಶಿಷ್ಟವನ್ನು ತಬ್ಬಿಕೊಂಡ ಪ್ರಣಾಳಿಕೆ ಇದಾಗಿದೆ. ಇದು ಬಿಟ್ಟು ಲಿಂಗಾಯತ ಪ್ರಣಾಳಿಕೆಯಿಲ್ಲ. ಅನಾದಿ -ಪ್ರಾಚೀನ ಎಂಬ ಸಂಗತಿಗಳು ಇಲ್ಲಿ ಅಪ್ರಸ್ತುತ.

(ಮುಂದುವರಿಯುವುದು...)

ಭುವಿಗೆ ಬಂದ ಭಗವಂತ

ಭುವಿಗೆ ಬಂದ ಭಗವಂತ
ಗುರು ಬಸವಣ್ಣನಾಗಿ ಭುವಿಗೆ ಬಂದ ಭಗವಂತ ॥ ಪ ॥
ತನ್ನ ಸಾಕಾರ ರೂಪವ ತೋರಲೆಂದು
ಗುರು ಬಸವಣ್ಣನಾಗಿ ಭುವಿಗೆ ಬಂದ ಭಗವಂತ ॥ ಅ.ಪ ॥

ಮರ್ತ್ಯಲೋಕದ ಮನುಜರು ಹೆಣೆದ
ಮೇಲು ಕೀಳಿನ ಜಾತಿಯ ಬಲೆಯಿಂದ
ನೊಂದು ಬೆಂದವರ ಹೊರತರಲೆಂದು
ಕಾರ್ಗತ್ತಲ ಕಾಲದಲಿ ಆಕಾಶ ದೀಪದಂತೆ ॥ 1 ॥

ಭಾರತ ಭೂಮಿಯ ಕರುನಾಡಿನಲ್ಲಿ
ಬಾಗೇವಾಡಿಯ ಅಗ್ರಹಾರದಲ್ಲಿ
ಮಾದರಸ ಮಾದಲಾಂಬೆಯ ಸುತನಾಗಿ
ಅಕ್ಕನಾಗಲಾಂಬೆಗೆ ಅನುಜನಾಗಿ ॥ 2 ॥

ಮರ್ತ್ಯಲೋಕವು ಬೆಳಗಲೆಂದು
ರುದ್ರಗಣಂಗಳ ತನ್ನೊಡನೆ ಕರೆತಂದು
ಅಮರ ಗಣಂಗಳೆಂದು ಹೆಸರಿಟ್ಟು ಕರೆದು
ತಾವ್ ಬಂದ ಮಣಹಕೆ ನೆರವಾಗಲೆಂದು ॥ 3 ॥

ನೀಲಗಂಗಳ ಸತಿಯಾಗಿ ಪಡೆದು
ಶಕ್ತಿ ವಿಶಿಷ್ಟನೆಂದು ಜಗಕೆ ಸಾರಿ
ಇಷ್ಟಲಿಂಗದ ಜನಕ ತಾನಾಗಿ
ಅರಿವಿನ ಕುರುಹಾಗಿ ಎದೆ ಮೇಲೆ ಕುಳಿತು ॥ 4 ॥

ಬಿಜ್ಜಳಗೆ ಮಂತ್ರಿಯಾಗಿ ಕಲ್ಯಾಣದಲ್ಲಿ
ಸಮಾನತೆಯ ಹರಿಕಾರನಾಗಿ
ಅನುಭವ ಮಂಟಪ ಕಟ್ಟಿದನಲ್ಲಿ
ಶರಣ ಶರಣೆಯರ ಸಮಾವೇಶದಲ್ಲಿ ॥ 5 ॥

ಆರು ಈರು ನೂರನೆ ವರುಷವು ಬಸವಯುಗವಾಯ್ತು
ಬಸವ ಲಿಂಗನೆಂಬುದು ದೇವನ ಹೆಸರಾಯ್ತು
ಜಗಜ್ಯೋತಿ ಬಸವೇಶನೆಂಬುದು ಮನೆ ಮಾತಾಯ್ತು
ಶರಣರ ಹೃದಯವು ಬಸವ ನಿವಾಸವಾಯ್ತು ॥ 6 ॥

ಬಸವ ನಾಮವು ನವ ಪ್ರಣವವೆಂದು
ಇಷ್ಟಲಿಂಗವು ನನ್ನರಿವಿನ ಕುರುಹೆಂದು
ಲಿಂಗಾಯತರೆಂದೇ ಖ್ಯಾತರಾಗಿರೆಂದು
ಗುರು ಬಸವಣ್ಣನಾಗಿ ತನ್ನಲ್ಲಿ ತಾನು ಐಕ್ಯನಾದ ಭಗವಂತನಂದು
ಬಸವ ಕಂದಳ ಪ್ರಿಯ ಸರ್ವೇಶ ಪ್ರಭುವಿನ ಸಾಕಾರ ರೂಪವ
ಕಂಡು ಧನ್ಯರಾದರಂದು

- ಸರೋಜಮ್ಮ ನಾಗರಾಜು















ತಮಿಳುನಾಡಿನ ಊಟಿಲ್ಲಿರುವ (ಸಕ್ಕಲಟ್ಟಿ) ಬಸವ ಮಂಟಪದ ವಾರ್ಷಿಕೋತ್ಸವ
ಮತ್ತು ಜಗನ್ಮಾತಾ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮ



CPMG/KA/BGW/50/2009-2011 RNI No.19980/70, Posted at MBC Bangalore GPO on 3,10,20 of every month licenced to post without prepayment -17
No of Pages 32